Secondly, the work which was done by ordinary contractors properly need not have been entrusted to other contractors. For instance, I was told that supply of bricks was regularly done by piece work contractors for a lesser rate and even then it was entrusted to other contractors. Thirdly, the supply of lime was entrusted to one contractor in place of hundred contractors. The supply was never hampered or slowed down. So, why should it have been given to one contractor ? Again, among the tendered rates, there is a vast difference between the lowest tendered rate and highest tendered rate for the same type of work. How could there be so much of difference in the rate ? How could the Government accept high rates for the same item when contractors have tendered lower rates ? Another thing is that the same contractor who tendered a particular rate for the first time has increased it by 15 to 16 per cent for the same work when he quoted for the second time. It is really a matter for consideration how these contractors all of a sudden could put up such high rates. Once when I was travelling in a train, some of the representatives of the contractors were also with me. They know even the horoscopes of our engineers. They know which engineer is after romance, which engineer is after money, which engineer can be influenced, which engineer is after liquor and so on and so forth. These contractors have made a special study of these engineers as to how they can be influenced. I was also a cantrator for some time but I did not have those qualities. I am surprised how these people are able to make a specialised psycho-analysis of the engineers and know their weak points. I am not generalising with regard to all the engineers. I am saying all this with regard to some engineers only. Some of them are very good engineers and Mysore is famous for some engineers. In Rourkela, one of the contractors who had undertaken a big work had to spend something in order that his rates might be accepted. I am afraid that some engineers might have even fooled the Government. Once Even Nehruji remarked in regard to Bakhra Nangal Project that no more should this type of contractors do work. The committee of experts was there and our Minister was also in favour of giving an increase on the entire estimate. I know the increase will work out to a certain percentage. Here, that is not the case. When you are purchasing so much of electrical goods, can we allow them to charge extra rates ? There are some items where the rates cannot be changed or enhanced. Here, the major work is masonry work and the rates can be doubled or it can be 116 per cent more than the estimate.

Sri H. M. CHANNABASAPPA.—I am sorry, I am not well. The Hon'ble Member is making statements without reference to facts. There is no question of 115 per cent or 116 per cent. The surki rate was Rs. 125 in 1954-55 and the accepted rate was about Rs. 155.

Sri C. K. RAJAIAH SETTY.—I did not refer to surki. This work was being done by some piece workers. The work was not hampered and the supply was regular and so there was no necessity to entrust it to a big contractor.

Sri H. M. CHANNABASAPPA.—At the time when the piece workers were doing the work what was the quantum of work that was being done and what is it that we have got to do now when we have to finish within 500 days. You have to calculate the requirements on the basis of the quantum of work that has to be turned out per day. At the time when the piece workers were doing the work, we had no phased programme and it was also not decided whether the work should be done by cement mortar or by surki mortar because at that time there was a big controversy whether cement mortar or surki mortar would be better and the C.P.W. was seized of the matter.

Sri C. K. RAJAIAH SETTY.—I do not blame the Government or the engineers or any other authority who may be in charge, but I want to point out that there are some facts and there are certain things which are fishy and so which require consideration so nothing prevents the Government from appointing a committee to go into the details and ascertain the facts. Or this matter can be entrusted to the Public Accounts Committee.

Sri H. M. CHANNABASAPPA.—It is very easy to say that something is fishy. I want to know what exactly is the thing which in your opinion is not correct so that I can know to what point exactly I should reply.

Sri C. K. RAJAIAH SETTY.—Why was supply of surki or lime which was entrusted to so many piece work contractors at a lesser rate entrusted to one big contractor at a higher rate? The second thing is that the same contractor who had quoted a lesser rate when he tendered for the first time quoted nearly 15 per cent more when he quoted for the second time within a gap of two months. The third thing is that while replying to the general discussion on the budget you said that the reason for giving enhanced rate was that the conditions there were special. The same conditions were prevailing there in 1955-56. In addition to this, my friend Sri Arumugham has mentioned certain instances. So, I do not simply say that something is fishy without facts.

Sri H. M. CHANNABASAPPA.—These are all matters which have been discussed by a committee consisting of six to seven engineers and then they have come to a conclusion. So, I fail to understand whether I or the Hon'ble Member can be the authority to speak on these matters. It is a committee of not one single engineer or three or four engineers but of six to seven engineers and they have finalised these matters.

Sri C. K. RAJAIAH SETTY.—Is it possible for that committee of engineers to go into the details of every item, prepare a comparative statement, etc., and submit a report? They considered it taking the overall picture of the total increase over the estimate. Then they came to a decision. But their position will be such that they are bound to accept because when there are only one or two contractors, the people will dictate terms. Another reason is, they have entrusted a portion of the work to some contractors and they cannot leave it incomplete. Therefore it is necessary for the committee to accept it. The circumstances forced the committee to accept and that was the only choice left to them.

With these few words I close my speech.

4 P.M.

†Sri A. R. PANCHAGAVI (Gokak II).—Sir, I rise to support the Demand put before the House. I come from an area where there are all sorts of problems. First, scarcity, bad roads, and want of roads and secondly even irrigation has been a problem in those parts. I shall first deal with the irrigation problem under Ghataprabha. The Ghataprabha left bank canal caters to a vast area but the major portion being black cotton soil we have to consider about the soil suitable for kharif crops. More than 45 per cent of area can be brought under kharif crops but I regret to say that water supply has not been properly given. Even to a small area

(SRI A. R. PANCHAGAVI)

that is now brought under irrigation. The supply system is not satisfactory. Most of the difficulties are man made and they can be removed. If we take the case of villages, where 1,000 acres were proposed to be brought under irrigation, supply of water is given only for about 100 acres. Even these 100 acres are not properly supplied with water. If we are not able to supply water in time and also sufficient quantity even for 100 acres as against 1,000 acres provided for, what would be the impression of the irrigators? They fail to understand why such a problem prevails and they cannot venture to bring the remaining acreage under irrigation. This is the thing that has actually occured. The persons entrusted with the distribution of water are not very keen about the interest the cultivators take in developing the crops. Therefore, what I suggest is, after irrigation work is complete, it should be handed over to the Agriculture Department and the distribution of water should be done by the Agriculture Department and not by the P.W.D. who have no knowledge of the problems of the agriculturists. They have no interest in the development of the crops or water requirements of various crops. I think the whole system has to be changed and a cadre of Agricultural Engineers has to be created and proper training given so that actual distribution of water is taken over by the Agricultural Department. If that is done, the Agriculture Department which is more interested in the various crops and the problems of the agriculturists, can develop the area more satisfactorily. As it is, we have not been doing it now. The difficulty lies with the personnel because they are not much interested in the development of the area, and the actual crops that are grown but only look to other things. These facts have been brought to the notice of the higher authorities and even the Ministers.

In the matter of uniformity in irrigation, we have not been able to bring about the same in the whole of Mysore State. The Bombay rules are very rigid and are not conducive to the development of irrigation. The rates for commercial crops in the Bombay-Karnatak area are very high when compared with the rates of old Mysore State. As regards food crops the rates are almost one and the same. For sugarcane crop we have to pay Rs. 120 but in the old Mysore area it is very much less. If these things are not remedied, it will be a great hardship for the people coming from North Karnatak and other areas. In the scarcity condition areas if we do not pay attention to irrigation developments, the sufferings of the people will be more.

As regards other things, water rate concessions have been given in the areas which were newly brought under irrigation. Since our area was in Bombay State and water was released in the year 1956-57, we could not avail ourselves of the water rate concession. Even in the year 1958-59 we were promised these concessions but we did not get. We got the concession only from 1959-60. About the levy of irrigation cess under the Ghataprabha, this area newly brought under irrigation is a seasonal irrigated area. Water is being allowed only in the monsoon. It is only because of scarcity conditions that people are taking to irrigation. It is more or less gambling with rains. Under such conditions unless and until the Ghataprabha irrigation scheme is fully completed, I for one would urge that irrigation cess, betterment levy and other levies should not be levied. At present there is no assured water supply and we do not have supply on account of want of rains. Actually in the old Gokak canal area we are given water for eight months but sometimes it so happens that we are not supplied in the beginning of the season, *i.e.*, on June 15th. As there are no rains we are given in the middle of July. At the end we are not given water upto 15th February and sometimes it stops suddenly. As regards maize crop, actually there is hue and cry for the last so many years. Maize actually flowers in the middle of December and suddenly the water supply stops and crops wither away.

If such conditions are prevailing and if we go on levying the betterment levy, the difficulties of the agriculturists will be very much.

Sri H. M. CHANNABASAPPA.—Does the Hon'ble Member suggest that after Hidkal dam is completed, betterment levy and water rate should not be collected ?

Sri A. R. PANCHAGAVI.—Water rate should be collected and ought to be collected, because that is a levy for the actual supply of water. But the difficulty is, when we levy irrigation cess and betterment levy, it is levied on all the lands and even on those who do not take water and even on lands which are not suited for irrigation. Sometimes, even the water-logged areas will have to pay betterment levy.

Sri C. J. MUCKANNAPPA.—Is it the intention of the Government to collect irrigation cess and water rate, on lands which do not get the benefit of water ?

Sri H. M. CHANNABASAPPA.—I do not know whether the Hon'ble Member is aware of the system that prevails. The system here is when the project is complete and water is available, whether the raiyat uses it or not, he has to pay water rate. But there the system is different. What the Hon'ble Member says is, although water is actually running in the channel by the side of his land, it is open to the cultivator to decline to take it; and his case is that such people should not be made to pay.

Sri A. R. PANCHAGAVI.—It is not my case that they should not be levied Sir. Unless and until a uniform system is introduced, there is a possibility of lands which are dependent on monsoon irrigation being taxed. The black soil is not suited for khariff crops. In some cases, if water is taken from the irrigation project, the land may deteriorate. In that case, if you tax such land, it hits the raiyat hard, because not only this will make his land worse than what it was but he will also be subject to tax also. I am saying that such things should not happen. You assure the water supply for all the seasons—for the *rabi* season and for *hingaru* crop, and then levy water rate and irrigation cess. Till then, it is only casual supply of water that we get through rains and there is no assured supply of water and till there is assured water facilities, these cesses should not be levied. That is what I suggest.

Another thing, Sir, our area being a scarcity area, till now, the Public Works Department was under the impression that the area that is brought under irrigation under the Ghataprabha right bank as well as the left bank, need not be taken up for Bhandaras, tank works and other things. That was a wrong impression. I consulted the Hon'ble Minister and told him our difficulties. We are not getting the benefit of major irrigation because Ghataprabha area was neglected when we were in Bombay State, and even now, due to some difficulties and on account of States Reorganisation, the Ghataprabha area development work was not undertaken till recently. Even now, the Hidkal Dam work is going on very slowly due to some difficulties. It is not the fault of the Government and I am not blaming the Government. But there are so many difficulties in the way. The rehabilitation of people in the areas that are coming up for submersion is also a problem. But till then, there is no hindrance, legal or other for undertaking minor irrigation works in the area. Under the impression that minor irrigation should not be undertaken in the areas that are likely to be covered by the Ghataprabha project, minor irrigation works which could have been easily taken up, were not at all undertaken. Only this year, there have been some survey works going on. And we hope that in this area, Bhandaras will be put up which will not only supplement the Ghataprabha system, but also will help the Ghataprabha irrigation system I have suggested so many works and I hope that there will be no legal hindrance to undertake minor irrigation works in such scarcity areas, simply because they are to be covered by the major irrigation works.

Sri H. M. CHANNABASAPPA.—Is it your case that although a particular area is likely to come under the

(SRI H. M. CHANNABASAPPA)

command to be covered by the Hidkal Dam canal, Government has got to take up minor irrigation works which will be superfluous at a later stage ?

SRI A. R. PANCHAGAVI.—That is a wrong impression Sir. In that Gokak area, so many minor irrigation works are to be undertaken because they have not been taken up for the last 50 years. That will be supplementing and not superfluous. That will be helping. These Bhandaras will be supplying water throughout the year, whereas the major irrigation system may give them water supply for all the months in the year. It may be seasonal for some area, for others it may be full 12 months. This work will be supplementing and not superfluous. That is what I have been discussing with the Hon'ble Minister and I think these minor irrigation works do deserve to be undertaken in spite of the fact that the area may be subsequently covered by the major irrigation scheme.

One point I may bring to the notice of the Hon'ble Minister is that the River Gokak also is in the State which comes in that area; down below the Gokak town, up to Bagalkot, actually since times immemorial, water was lifted in Bamboo baskets and was supplied to irrigate some vegetabas plots-brinjals and other things. They grow these vegetables in very small areas and these people are charged water rate. When a man by his own manual labour lifts water and supplies water to his own land, a very small area, such people should not be taxed and no water rate or irrigation cess should be levied on them. On the contrary, instead of simply levying water rate, they are even fined and you are aware, Sir, that fines collected in the Bombay area amounted to a large sum. They sometimes come to ten to thirty times the actual water rate. Such people will have to sell their lands if they are to be taxed and fined like this for two years. I therefore suggest that such people should not be taxed at all and this is a concession they have been enjoying from times immemorial and such minor things should not be taxed.

†ಶ್ರೀ ಎಸ್. ಮುನಿರಾಜು (ಚಿಕ್ಕಬಳ್ಳಾಪುರ).—ಸ್ವಾಮಿ, ಲೋಕೋಪಯೋಗಿ ಶಾಖೆಯ ಈ ಮುಖ್ಯವಾದಂಥ ಬೇಡಿಕೆಗೆ ನನ್ನ ಸಂಪೂರ್ಣ ಅನುಮೋದನೆಯನ್ನು ಕೊಡುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದು ಬಯಸುತ್ತೇನೆ. ಈ ಇಲಾಖೆಯನ್ನು ಮುಖ್ಯವಾಗಿ ಮೂರು ಗುಂಪುಗಳಾಗಿ ವಿಂಗಡಿಸಿ ವಿಚಾರ ಮಾಡಬೇಕಾಗಿದೆ. ಇರಿಗೇಷನ್ ಡಿವಿಜನ್, ಬಿಲ್ಡಿಂಗ್ಸ್ ಡಿವಿಜನ್ ಮತ್ತು ರೋಡ್ಸ್ ಡಿವಿಜನ್ ಎಂದು ಹೇಳಿ ಮೂರು ಭಾಗಗಳಾಗಿ ವಿಂಗಡಿಸಿ ಪ್ರತಿಯೊಂದು ಭಾಗದಲ್ಲೂ ಎಷ್ಟು ಮಟ್ಟಿಗೆ ಪ್ರಗತಿಯಾಗಿದೆ, 61ನೇ ಸಾಲಿನ ಬೇಡಿಕೆಗೆ ನಮ್ಮ ಅನುಮೋದನೆಯನ್ನು ಕೊಡುತ್ತಾ ಎಷ್ಟು ಮಟ್ಟಿಗೆ ಸ್ವಲ್ಪ ಬದಲಾವಣೆ ಆಗಬೇಕು ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ.

ಮುಖ್ಯವಾಗಿ ಇರತಕ್ಕದ್ದು ಇರ್ರಿಗೇಷನ್. ಅನೇಕ ಸ್ನೇಹಿತರು ಬಹಳ ವಿಶಾಲ ಹೃದಯದಿಂದ ಈಗ ನಡೆಯುತ್ತಾ ಇರತಕ್ಕ ಕಾಮಗಾರಿಗಳಿಗೆ ತುಂಬ ಅನುಮೋದನೆಯನ್ನು ಸೂಚಿಸಿರತಕ್ಕದ್ದು ಹರ್ಷದಾಯಕವಾದ ವಿಷಯ. ಇರ್ರಿಗೇಷನ್ ಡಿವಿಜನ್ ಎನ್ನುವುದು ಬಹಳ ಮುಖ್ಯವಾದದ್ದು. ಬಹಳ ದೊಡ್ಡ ಕಾಮಗಾರಿಗಳನ್ನು ಮಾಡಬೇಕಾಗಿದೆ. ಹಳೆಯ ಮೈಸೂರಿನ ಪ್ರದೇಶದಲ್ಲಿ ದೊಡ್ಡ ದೊಡ್ಡ ಕೆರೆಗಳು ಸಣ್ಣ ಸಣ್ಣ ಕೆರೆಗಳು ಇರುವ ಪ್ರದೇಶದಲ್ಲಿ ಹಿಂದೆ ಒಂದು ಕೆಲಸ ಯಾವ ಮಟ್ಟಿಗೆ ಮಾಡಿದ್ದಾರೆಂದು ನೋಡಿದರೆ, ಹೊಸ ಕೆರೆಗಳನ್ನು ಕಟ್ಟಲಿಕ್ಕೆ ಅವಕಾಶವಿಲ್ಲದಂತೆ ನಮ್ಮ ಹಿರಿಯರು ಬಹಳ ಕಷ್ಟಪಟ್ಟು ಕೆರೆಗಳನ್ನು ಕಟ್ಟಿದ್ದಾರೆ ಎಂದು ಹೇಳುತ್ತೇನೆ. ಇಂಥಾ ಕೆರೆಗಳ ರಿಪೇರಿ ಕೆಲಸ ಕೂಡ ಮಾಡುವುದಕ್ಕೆ ಆಗುತ್ತಾ ಇಲ್ಲ. ಎಲ್ಲಾ ಕೆರೆಗಳ ರಿಪೇರಿ ಕೆಲಸ ಕೂಡ ಒಂದೇ ಸಮನೆ ಮಾಡತಕ್ಕದ್ದು ಕಷ್ಟ. ಈ ಇಲಾಖೆಗೆ ದೊಡ್ಡ ತೊಂದರೆ ಇದೆ. ಈ ಇಲಾಖೆಯಲ್ಲಿರತಕ್ಕ ಅನೇಕ ಕಷ್ಟಗಳನ್ನು ಎದುರಿಸಬೇಕಾಗಿ ಬಂದಿದೆ. ಈಗ ಇನ್‌ವೆಸ್ಟಿಗೇಷನ್ ಸರ್‌ಕಲ್ಸ್ ಎಂದು ಎರಡು ಮಾಡಿದ್ದೀರಿ. ನಾನು ಹಿಂದೆ ಹೇಳಿದ ರೀತಿಯಲ್ಲಿ ಯಾವ ಯಾವ ಕೆರೆಗಳಿಗೆ ರಿಪೇರಿ ಮಾಡಬೇಕು ಎಂದು ಅಂದಾಜು ತಯಾರು ಮಾಡಬೇಕು ಮತ್ತು ಎಲ್ಲೆಲ್ಲಿ ಹೊಸ ಕೆರೆಗಳನ್ನು ಸಣ್ಣ ಸಣ್ಣ ಪಿಕಪ್ ಕಟ್ಟುವುದು ಬಹಳ ಅಗತ್ಯ ಇದೆ ಎಂಬುದನ್ನು ನೋಡಬೇಕು. ಯಾವ ಹಳ್ಳಿಯ ಪ್ರದೇಶಕ್ಕೆ ಹೋದರೂ, ಯಾವ ತಾಲ್ಲೂಕಿಗೆ ಹೋದರೂ ನಮ್ಮ ಕೆರೆಗಳು ಶೇಕಡಾ 95 ಭಾಗ ರಿಪೇರಿ ಆಗಬೇಕು, ಎಂದು ರೆಪ್ರಿಜೆಂಟೇಷನ್ ಬರುತ್ತಿದೆ. ಇನ್‌ವೆಸ್ಟಿಗೇಷನ್ ಸರ್‌ಕಲ್ ಎರಡು ಮಾಡಿ ನೋಡಿಸುತ್ತೇವೆಂದು ಹೇಳಿದರೆ ಒಪ್ಪತಕ್ಕದ್ದು ಅಲ್ಲ. ಶ್ರೀ ಚನ್ನಬಸಪ್ಪನವರು ಎಷ್ಟೇ ಚುರುಕಾಗಿ ಕೆಲಸ ಮಾಡಿಕೊಂಡು ಹೋಗುತ್ತೇವೆಂದು ಅಂಕಿ ಅಂಶಗಳನ್ನು ತೋರಿ ಕೊಟ್ಟರೂ ಅದು ಲೆಖ್ಖ ಹಾಕಿಕೊಂಡು ಹೋದರೆ ಇನ್ನೂ ಸಾಲದು ಎಂದು ಹೇಳಬೇಕಾಗುತ್ತದೆ. ಈ ಇಲಾಖೆಯವರು ಚೆನ್ನಾಗಿ ಕೆಲಸ ಮಾಡುತ್ತಾ ಇರಬಹುದು. ಹಿಂದಿನಿಂದ ರಿಪೇರಿ ವಗೈರೆ ಮಾಡದೆ ಈಗ ಹೆಚ್ಚಿನ ರೀತಿ ಮಾಡ ಬೇಕಾದರೆ ಇನ್‌ವೆಸ್ಟಿಗೇಷನ್ . ಸರ್‌ಕಲ್ ಎರಡು ಮಾಡಿದರೆ ಯಾವ ಪುರುಷಾರ್ಥವನ್ನು ಸಾಧಿಸಿದಂತಾಗುತ್ತದೆ ? ಮೈಸೂರಿನಲ್ಲಿರುವ ಸೂಪರಿಂಟೆಂಡಿಂಗ್ ಇಂಜಿನಿಯರು ಸಾಹೇಬರು ಬಾಗೇಪಲ್ಲಿಗೆ ಬಂದು ನೋಡಿ ಕಾಮಗಾರಿಯನ್ನು ಮಂಜೂರು ಮಾಡುತ್ತಾರೆಂದರೆ ಖಂಡಿತವಾಗಿಯೂ ಅದು ಆಗತಕ್ಕದ್ದು ಅಲ್ಲ. ಅದರ ಸ್ವರೂಪವನ್ನು ಬದಲಾಯಿಸಬೇಕು. ಎರಡು ಇರತಕ್ಕದ್ದನ್ನು 4-6 ಮಾಡಿ ಇವೊತ್ತಲ್ಲ ನಾಳೆಯಾದರೂ

ಪ್ರತಿಯೊಂದನ್ನೂ ಮಾಡಬೇಕು. ಹಣವನ್ನು ಉಳಿತಾಯ ಮಾಡುತ್ತೇವೆಂದರೆ ಅದು ಸಾಧ್ಯವಿಲ್ಲ. ಎಲ್ಲಾ ಕೆರೆಗಳರಿಪೇರಿ ಆಗಬೇಕು. ಹೊಸಕೆರೆಗಳನ್ನು ಕಟ್ಟುವುದಕ್ಕೆ ಎಲ್ಲಿ ಅವಕಾಶವಿದೆ ಎಂಬುದನ್ನು ನೋಡಬೇಕು. ಸಣ್ಣಸಣ್ಣ ಪಿಕಪ್‌ಗಳನ್ನು ಕಟ್ಟಬೇಕು. ಇನ್‌ವೆಸ್ಟಿಗೇಷನ್ ಸರ್‌ಕಲ್‌ಗಳನ್ನು ಇನ್ನು ಹೆಚ್ಚುಮಾಡಿ ಇರತಕ್ಕ ಅಸಿಸ್ಟೆಂಟ್ ಇಂಜಿನಿಯರುಗಳು, ಮತ್ತು ಎಗ್ಸಿಕ್ಯುಟೀವ್ ಇಂಜಿನಿಯರುಗಳು ಏನು ಇದ್ದಾರೆ ಅವರಿಗಾದರೂ ಇದನ್ನು ಸೇರಿಸಿ ಹೆಚ್ಚಿನ ಸಿಬ್ಬಂದಿ ಕೊಟ್ಟು ಇನ್‌ವೆಸ್ಟಿಗೇಷನ್ ಮಾಡುವಂಥಾದ್ದು ಮಾಡಬೇಕು. ಅದನ್ನು ಪರಿಶೀಲಿಸಬೇಕು ಎಂದು ಹೇಳುತ್ತೇನೆ. ಸರ್‌ಕಲ್ ಸ್ಟ್ಯಾಫ್ ಮೆಂಬರ್ಸ್ ಕಡಿಮೆ ಇರುವುದರ ಜೊತೆಗೆ ಮೆಟೀರಿಯಲ್ಸ್ ಇಲ್ಲ. ಒಂದು ಕೆರೆಯ ಕಾಮಗಾರಿ ಕೆಲಸಕ್ಕೆ ಮೆಟೀರಿಯಲ್ಸ್‌ನಿಂದ ಹಿಡಿದು, ಲೆವೆಲ್ಸ್ ನೋಡುವುದಕ್ಕೆ ಬೇಕಾದ ಯಾವ ಯಂತ್ರೋಪಕರಣಗಳೂ ಸಿಕ್ಕದೆಹೋದರೆ, ಬಹಳ ಕಷ್ಟವಾಗುತ್ತದೆ. ಒಂದು ಉಪಕರಣ ಕೂಡ ಬೇಕಾದರೆ ಚೀಫ್ ಇಂಜಿನಿಯರಿಗೆ ಹೋಗಬೇಕು, ಗೌರ್ನಮೆಂಟಿಗೆ ಬರಬೇಕು ಎಂದು ಹಿಂದಿನ ಪ್ರೊಸೀಜರೇ ಇನ್ನೂ ಇದೆ ಎಂದು ಕೇಳಿದ್ದೇನೆ. ಅದನ್ನು ಸಡಲಗೊಳಿಸಿ ಎಗ್ಸಿಕ್ಯುಟೀವ್ ಇಂಜಿನಿಯರ್, ಬೇಕಾದ ಉಪಕರಣಗಳನ್ನು ಕೊಡದೆಹೋದರೆ ಖಂಡಿತ ಆಗುವುದಿಲ್ಲ, ಎಂದು ಹೇಳುತ್ತೇನೆ. ಅದರ ಜೊತೆಗೆ ಹಿಂದಿನ ಕ್ರಮ ಇರತಕ್ಕದ್ದು ಒಂದು ಕಷ್ಟದಾಯಕವಾಗಿದೆ. ಖಂಡಿತವಾಗಿಯೂ ಈ ಸಮಸ್ಯೆಯನ್ನು ಧೈರ್ಯದಿಂದ ಎದುರಿಸಬೇಕಾಗಿದೆ. ಈಗ ಇರತಕ್ಕ ಕಾವೇರಿ ಬೇಸಿನ್ ತೆಗೆದುಕೊಂಡು ಒಂದುಲಕ್ಷ ಹತ್ತುಸಾವಿರ ಎಕರೆ ಜಮೀನನ್ನು ಸಾಗಿಗೆ ತರುವುದಕ್ಕೆ ಅವಕಾಶವಿದೆ. 36ವರ್ಷಗಳಿಂದ ಕೇಳಿದರೂ ಕೇವಲ ಅರ್ಧ ಭಾಗವನ್ನಾದರೂ ಸಾಗಿಗೆ ತಂದಿಲ್ಲ. ಈ ರೀತಿ ಮಾಡುವುದರಿಂದ ಜನರಿಗೆ ಅನಾನುಕೂಲವಾಗುವುದಕ್ಕೆ ಅವಕಾಶವಾಗಿದೆ. ಅಗ್ರಿಮೆಂಟ್ ಪ್ರಕಾರ ಆಂಧ್ರದವರಿಗಾಗಲೀ ಮೈಸೂರಿನವರಿಗಾಗಲೀ ಯಾವರೀತಿ ಅನಾನುಕೂಲವಾಗಿದೆಯೆಂದು ಪರಿಶೀಲನೆಮಾಡಿ ಧೈರ್ಯದಿಂದ ಅನುಕೂಲತೆಯನ್ನು ಮಾಡಿಕೊಡಬೇಕು, ಎಂದು ಹೇಳುತ್ತೇನೆ. ಪಾಲಾರ್ ಮತ್ತು ಕುಮುದ್ವತಿ ನದಿಯ ವಿಚಾರದಲ್ಲಿ ಅಲ್ಲಿಯ ಎಗ್ಸಿಕ್ಯುಟೀವ್ ಇಂಜಿನಿಯರ್, ಚೀಫ್‌ಇಂಜಿನಿಯರ್ ಜೊತೆಗೆ ವಾದಮಾಡಿಕೊಳ್ಳುತ್ತಾ ಹೋದರೆ ಬಗೆ ಹರಿಯುವುದಿಲ್ಲ. ಯಾವುದಾದರೂ ಒಂದುಸೂಕ್ತ ರೀತಿಯಲ್ಲಿ ವ್ಯವಹರಿಸಿ ಸರಿಯಾದ ರೀತಿಯಿಂದ ಮುಂದಕ್ಕೆ ಹೋಗಬೇಕಾದರೆ ಒಂದು ನೀತಿಯನ್ನು ಅನುಸರಿಸಬೇಕು. ಈ ರೀತಿ ಮುಂದಗತಿಯಿಂದ ಹೋದರೆ ಖಂಡಿತಾ ಆಗುವುದಿಲ್ಲ. ಚಿಕ್ಕಬಳ್ಳಾಪುರದಲ್ಲಿ ಜಕ್ಕಲಮಡು ರಿಜರ್ವಾಯರ್ ಆಗ ಬೇಕೆಂದು 10 ವರ್ಷಗಳಿಂದ ಕೇಳುತ್ತಿದ್ದೇವೆ. ತಿರುಮಣಿ ಮತ್ತು ಬಾಗೆಪಲ್ಲಿಯವರು ಅದಕ್ಕೆ ಒಪ್ಪುವುದಿಲ್ಲ ಎಂದು ಹೇಳಿ ಜಕ್ಕಲಮಡು ಜಲಾಶಯವನ್ನು ಶುರುಮಾಡಿದರು, ಕೆಲಸ ನಿಂತುಹೋಯಿತು, ಅದರ ಜೊತೆಯಲ್ಲಿ ತಿರುಮಣಿ ಕೆಲಸ ನಡೆಸಿಲ್ಲ. ಈಗಲೂ ನಡೆಸುವ ಸೂಚನೆ ಕಾಣಲಿಲ್ಲ. ನಮ್ಮ ಚೀಫ್ ಇಂಜಿನಿಯರು ಅವರೊಡನೆ ಮಾತನಾಡಿದರೆ ಒಪ್ಪುವುದಿಲ್ಲ. ಅದು ನ್ಯಾಯವೇ ಎಂದು ಪರಿಶೀಲನೆ ಮಾಡುವ ಮನಸ್ಸು ಇರುವುದುಕಾಣೆ. ನಾವು ಒಂದು ನೀತಿಯನ್ನು ಅದರಲ್ಲಿ ತಾಳಬೇಕು ಎಂದು ಹೇಳುತ್ತೇನೆ. ಎಲ್ಲೆಲ್ಲಿ ವಾದವಿವಾದ ಇದೆಯೋ ಅಲ್ಲಿ ವಾದವಿವಾದ ಇಲ್ಲದೆ ನಾವು ಎಷ್ಟು ಉಪಯೋಗಿಸಿಕೊಳ್ಳಬಹುದೋ ಅಷ್ಟನ್ನು ಉಪಯೋಗಿಸಿಕೊಳ್ಳಬೇಕು ಎಂದು ಹೇಳುತ್ತೇನೆ. ಇಷ್ಟು ಇರ್ರಿಗೇಷನ್ ವಿಷಯ.

ಇನ್ನು ರೋಡ್ಸ್ ವಿಷಯ ತೆಗೆದುಕೊಂಡರೆ ಅದು ಇನ್ನೂ ರಭಸದಿಂದ ನಡೆಯಬೇಕಾಗುತ್ತದೆ. ಹಳೆಯ ಮೈಸೂರಿನಲ್ಲಿ ರೋಡಿನ ಅಗತ್ಯ ಇದೆಎಂದು ನಾವು ಒತ್ತಿ ಹೇಳಬೇಕಾಗಿದೆ. ಹೊಸ ಮೈಸೂರಿನ ಕಡೆ ರೋಡಿನ ಅಗತ್ಯ ಹೆಚ್ಚಾಗಿದೆ. ಅದು ನನಗೆ ಮನವರಿಕೆಯಾಗಿದೆ. ಹಳೆಯ ಮೈಸೂರಿನಕಡೆ ಮಾಡಬೇಕು ಹೊಸ ಮೈಸೂರು ಕಡೆ ಮಾಡಕೂಡದು ಎಂದು ನಾನು ವಾದಮಾಡಿಕೊಂಡು ಹೋಗವುದಿಲ್ಲ. ಹೊಸ ಮೈಸೂರು ಪ್ರದೇಶದಲ್ಲಿ ಹೆಚ್ಚಿಗೆ ಸೇತುವೆಗಳು ಆಗಬೇಕು. ಅದಕ್ಕಾಗಿ ಕೇಂದ್ರ ಸರ್ಕಾರದವರನ್ನು ಹಣ ಕೇಳಬೇಕು, ವೆಸ್ಟ್‌ಕೋಸ್ಟ್ ರೋಡ್ ಎಂದು ಹೇಳಿಕೊಳ್ಳುತ್ತಾರೆ. ಅದು ಸಾಲದು. ಬೊಂಬಾಯಿ, ಹೈದರಾಬಾದ್ ಪ್ರದೇಶ ಬಹಳ ಹಿಂದುಳಿದಿದೆ. ಆ ಕಡೆ ಸ್ವಲ್ಪ ವೇಗವಾಗಿ ಮಾಡಬೇಕು. ಅಲ್ಲಿಗೆ ಹೆಚ್ಚಿನ ಹಣವನ್ನು ಸೆಂಟ್ರಲ್ ಗೌರ್ನಮೆಂಟಿನಿಂದ ಪಡೆಯುವುದಕ್ಕೆ ಪ್ರಯತ್ನಮಾಡಬೇಕು ಎಂದು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ರೂರಲ್ ಕಮ್ಯುನಿಕೇಷನ್ ಸ್ಕೀಮನ್ನು ನಿನ್ನೆವರ್ಷದಿಂದ ಹೊರಡಿಸಿದ್ದಾರೆ. ಖಂಡಿತವಾಗಿಯೂ ಇದಕ್ಕಾಗಿ ಸರ್ಕಾರದವರನ್ನು ಅಭಿನಂದಿಸುತ್ತೇನೆ. ಒಂದು ಹಳ್ಳಿಗೆ ತೀರಾಕಡಿಮೆ ಎಂದರೆ ರಸ್ತೆ ಮತ್ತು ಕುಡಿಯುವ ನೀರಿನ ಬಾವಿಯನ್ನು ಕೊಡುವುದು ಆದ್ಯ ಕರ್ತವ್ಯ ಎಂದು ಹೇಳಿಕೊಳ್ಳುತ್ತಿದ್ದೆವು, ಅದನ್ನು ಮುಂದಾದರೂ ಕೂಡ ಮಾಡುತ್ತೇವೆ ಎಂದು ಆಶೆಬಂದಿದೆ. ರೂರಲ್ ವರ್ಕ್ಸ್‌ನಲ್ಲಿ 17ಸಾವಿರ ಮೈಲಿ ರಸ್ತೆ ತೆಗೆದುಕೊಳ್ಳಬೇಕು ಎಂದು ಶ್ರೀ ಚನ್ನಬಸಪ್ಪನವರು ಹೇಳುತ್ತಾ ಇದ್ದಾರೆ ಅವರೆ ಎಷ್ಟರಮಟ್ಟಿಗೆ ಫೈನಾನ್ಸ್ ಆಗುತ್ತದೋ ಎಂದು ಶಂಕೆಯುಂಟಾಗಿದೆ. ಒಂದು ಪ್ಲಾನ್ ಬೇಸಿಸ್ ಮೇಲೆ ಹೋದರೆ 5 ವರ್ಷಗಳಲ್ಲಿ ಅಥವ 3 ವರ್ಷಗಳಲ್ಲಿ ಅದೆಲ್ಲವನ್ನೂ ಮಾಡಬಹುದು, ರೋಡುಗಳಿಗೆ ಕೊಟ್ಟಿರತಕ್ಕ ಹಣ ಬೇಕಾದಷ್ಟು ಲ್ಯಾಪ್ಸ್ ಆಗುತ್ತಿದೆ. ಬೇಕಾದಷ್ಟು ರೋಡುಗಳಿಗೆ ಕೊಟ್ಟ ಹಣದಲ್ಲಿ ಸರೆಂಡರ್ ಮಾಡುತ್ತಿದ್ದೀರಿ. ಏತಕ್ಕೆ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು P.W.D. ರೋಡುಗಳಿಗೆ ಹಣ ಕೊಡುವುದರಲ್ಲಿ ಶೇಕಡಾ 35 ಭಾಗವನ್ನು ನಮ್ಮ ಡಿವಿಜನ್‌ನಲ್ಲಿಯೇ ಲ್ಯಾಪ್ಸ್ ಆಗುತ್ತಿದೆ? ಅದರ ಕಡೆ ಗಮನ ಕೊಡಬೇಕು. ಹಳ್ಳಿಗಳಿಗೆ, ಮತ್ತು ತಾಲ್ಲೂಕುಗಳಿಗೆ ಮುಖ್ಯವಾಗಿ ಯಾವ ರಸ್ತೆಗಳನ್ನು ಮಾಡಬೇಕೋ ಅವುಗಳ ಬ್ಲೂಪ್ರಿಂಟ್ ತಯಾರುಮಾಡಿ ಇಂಥಾ ರಸ್ತೆಗಳನ್ನು ಕೊಡಬೇಕುಎಂದು ತೀರ್ಮಾನ ಮಾಡಿ, ಅದನ್ನು ಕೊಡುವುದಕ್ಕೆ ಪ್ಲಾನ್ ಬೇಸಿಸ್ ಮೇಲೆ ಇಷ್ಟು ರೋಡುಗಳಿಗೆ ಹಣ ಒದಗಿಸಬೇಕು ಎಂದು ಮಾಡಿ 75 ಲಕ್ಷರೂಪಾಯಿಗಳನ್ನು ಒದಗಿಸಿದ್ದಾರೆ. 25 ಲಕ್ಷರೂಪಾಯಿಗಳನ್ನು ಸಣ್ಣ ಸೇತುವೆಗಳಿಗೆ ಒದಗಿಸಿದ್ದಾರೆ. 25 ಲಕ್ಷರೂಪಾಯಿಗಳನ್ನು ರೂರಲ್ ಕಮ್ಯುನಿಕೇಷನ್ನಿಗೆ ಒದಗಿಸಿದ್ದಾರೆ. 25 ಲಕ್ಷರೂಪಾಯಿಗಳನ್ನು ಶ್ರಮದಾನ ಕಾರ್ಯಕ್ಕೆ ಒದಗಿಸಿದ್ದೀರಿ. ಫ್ಯಾಮಿನ್ ರಿಲಿಫ್ ವರ್ಕ್ಸ್‌ಗೆ ಹಣ ಒದಗಿಸಿರುವುದು ಸಾಲದು. ಅವನ್ನು ಇನ್ನು ಹೆಚ್ಚು ಮಾಡಬೇಕು. ವೆಸ್ಟ್‌ಕೋಸ್ಟ್ ರೋಡುಗಳಿಗೆ ಖರ್ಚು ಮಾಡಬೇಕಾದ್ದನ್ನು ಆ ವರ್ಷಕ್ಕೆ ಖರ್ಚು ಮಾಡುತ್ತೀರಾ ಎಂದುಕೊಂಡಿದ್ದೇನೆ. ಅಷ್ಟು ಹಣ ಖರ್ಚಾಗುವುದಿಲ್ಲ. ಆದ್ದರಿಂದ ಎರಡು ಕೋಟಿರೂಪಾಯಿಗಳು ಖರ್ಚಾಗಬೇಕು ಎಂದು ಇಲಾಖೆಗೆ ಸೂಚನೆ ಕೊಡ

(ಶ್ರೀ ಎಸ್. ಮುನಿರಾಜು)

ಬೇಕು. ಡಿಸೆಂಬರ್ ಜನವರಿ ತಿಂಗಳಿನಲ್ಲಿ ಕೆಲಸ ಜಾಸ್ತಿ ಮಾಡಿ ಎಂದು ಹೇಳುತ್ತೀರಿ ಹಾಗೆ ಮಾಡುವುದನ್ನು ಬಿಟ್ಟು ಜಾಗ್ರತೆ ಕೆಲಸಮಾಡಬೇಕೆಂದು ಈಗಿನಿಂದಲೇ ಸೂಚನೆ ಕೊಡಬೇಕೆಂದು ಹೇಳುತ್ತೇನೆ.

4-30 P.M.

Flood control ವಿಷಯದಲ್ಲಿ ಮಾನ್ಯ ರಾಜಯ್ಯ ಶೆಟ್ಟರು ಹೇಳಿದರು ಈ ಕೆಲಸಕ್ಕೆ ತಕ್ಕಷ್ಟು ಹಣವನ್ನು ಕೇಂದ್ರ ಸರ್ಕಾರದವರು ನಮಗೆ ಮಂಜೂರು ಮಾಡುತ್ತಿಲ. ಉದಾಹರಣೆಗೆ ಬಾಗೇಪಲ್ಲಿ ಮತ್ತು ಚಿಂತಾಮಣಿ ತಾಲ್ಲೂಕುಗಳಲ್ಲಿ ಹರಿಯುವ ಕುಮುದ್ವತಿ ನದಿಯಿಂದ ಅದರ ದಡಗಳಲ್ಲಿ ಆಗುವ ಹಾವಳಿಯನ್ನು ಹೇಳಿತೀರದು. ಚೀಫ್ ಇಂಜಿನಿಯರು ಬಂದು ಇದನ್ನೆಲ್ಲ ನೋಡಿಕೊಂಡು ಎರಡು ಎರಡೂವರೆ ಲಕ್ಷರೂಪಾಯಿಗಳ ಅಂದಾಜನ್ನು ಮಾಡಿದ್ದಾರೆ. ಈ ಬಗ್ಗೆ ಕೇಂದ್ರ ಇಲಾಖೆಗೆ ಒತ್ತಾಯಮಾಡಬೇಕು. ಕೇಂದ್ರ ಸರ್ಕಾರದಿಂದ ನಮ್ಮ ಸರ್ಕಾರಕ್ಕೆ ಸಹಾಯ ಬರುತ್ತಿಲ್ಲ, ನಮ್ಮಗೆ ಪ್ರಯೋಜನ ವಾಗುತ್ತಿಲ್ಲ ಹೀಗಾಗಿದೆ. ಆದ್ದರಿಂದ ಕೇಂದ್ರ ಸರ್ಕಾರದಿಂದ ಈ ಕಾರ್ಯಕ್ಕೆ ಬರಬೇಕಾದ ಹಣವನ್ನು ಪಡೆಯಲು ಇಲಾಖಾಧಿಕಾರಿಗಳು ಹೆಚ್ಚು ನಿಗಾಕೊಟ್ಟು ಈ ಕೆಲಸವನ್ನು ಮಾಡಿಸಿ ಕೊಡಬೇಕೆಂದು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ.

ಬಿಲ್ಡಿಂಗ್ಸ್ ಡಿವಿಷನ್ನಿಗೆ ಬಂದರೆ, ನಿರೀಕ್ಷಿಸಿದಷ್ಟು ಕೆಲಸ ಖಂಡಿತವಾಗಿಯೂ ಈ ಡಿವಿಷನ್ನಿನಲ್ಲಿ ನಡೆಯುತ್ತಿಲ್ಲ. 10-15 ವರ್ಷಗಳಹಿಂದೆ ಒಂದು ಸ್ಕೂಲ್ ಕಟ್ಟಡವಾಗಲು ಹತ್ತಿಪ್ಪತ್ತು ಸಾವಿರ ರೂಪಾಯಿ ಕೊಟ್ಟಿರತಕ್ಕ ದಾನಿಗಳು ಇದ್ದಾರೆ. ಈ ಕಟ್ಟಡಗಳನ್ನು ತಮ್ಮ ಕಣ್ಣಿನಿಂದ ನೋಡೋಣವೆಂದು ಆಶೆಯನ್ನಿಟ್ಟು ಕೊಂಡು ಬಹಳ ಜನ ಇರುತ್ತಾರೆ. ಎಷ್ಟುಕಾಲವಾದರೂ ಕಟ್ಟಡಗಳು ಆಗದೆಇದ್ದರೆ ದಾನಿಗಳ ಆಸೆಯು ಈಡೇರುವುದಿಲ್ಲ. ಸರ್ಕಾರಕ್ಕೂ ಖರ್ಚು ಜಾಸ್ತಿಯಾಗುತ್ತದೆ. ಹತ್ತುವರ್ಷಗಳ ಹಿಂದೆ ಹನ್ನೆರಡು ಸಾವಿರರೂಪಾಯಿಗಳಿಗೆ ಆಗುತ್ತಿದ್ದ ಕಟ್ಟಡಕ್ಕೆ ಇವೊತ್ತು 30-35 ಸಾವಿರ ರೂಪಾಯಿ ವ್ಯಯವಾಗಬೇಕಾಗಿದೆ. ದಾನಿಗಳು ಯಾರು ಯಾರು ಆಸ್ಪತ್ರೆ ಕಟ್ಟಡಗಳಿಗೆ, ಶಾಲ ಕಟ್ಟಡಗಳಿಗೆ ಮತ್ತು ಇತರ ಕಟ್ಟಡಗಳಿಗೆ, ಹಣವನ್ನು ಕೊಟ್ಟಿರುತ್ತಾರೆನ್ನುವ ಒಂದು ಪಟ್ಟಿಯನ್ನು ತಯಾರಿಸಿ ಅದರ ಕಡೆ ಹೆಚ್ಚುನಿಗಾ ಕೊಟ್ಟು ಒಂದು ವರ್ಷದಲ್ಲಿ ಎಲ್ಲ ಕಟ್ಟಡಗಳೂ ಆಗುವಂತೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಈ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಚಿಂತಾಮಣಿಯಲ್ಲಿ ಬಾಲಕಿಯರ ಮಾಧ್ಯಮಿಕ ಶಾಲಾ ಕಟ್ಟಡಕ್ಕಾಗಿ ಹದಿಮೂರುವರ್ಷಗಳ ಹಿಂದೆ ಒಬ್ಬ ಮಹನೀಯರು ಹತ್ತು ಸಾವಿರರೂಪಾಯಿಗಳನ್ನು ಕೊಟ್ಟರು. ಹಿಂದೆ ಮಾನ್ಯ ವೆಂಕಟಪ್ಪನವರು ವಿದ್ಯಾಖಾತೆಯ ಮಂತ್ರಿಗಳಾಗಿದ್ದಾಗ ಅವರ ಜೊತೆಯಲ್ಲಿ ಚಿಂತಾಮಣಿಗೆ ನಾನೂ ಹೋಗಿದ್ದೆ. ಆಗ ದಾನಿಗಳ ಮಗ ಬಂದು ನಮ್ಮ ತಂದೆಯವರು ತಾವು ಸಾಯುವ ಮೊದಲು ಶಾಲಾ ಕಟ್ಟಡವನ್ನು ನೋಡಬೇಕೆಂದು ಹೇಳುತ್ತಿದ್ದರು. ಅವರ ಆಸೆ ಈಡೇರಲಿಲ್ಲವೆಂದು ಹೇಳಿದರು. ಕಟ್ಟಡದ ಕೆಲಸ ಈಗಲೂ ಪ್ರಾರಂಭವಾಗಿಲ್ಲ. ಈಸಲ ಅದನ್ನು ಬಡ್ಜೆಟ್ಟಿನಲ್ಲಿ ಸೇರಿಸಿದ್ದಾರೆ. ಇಂಥ ಕೆಲಸಕಾರ್ಯಗಳು ಏತಕ್ಕೆ ಆಗಲಿಲ್ಲವೆನ್ನುವುದರ ಕಡೆ ಬಹಳ ನಿಗಾಕೊಟ್ಟು, ಆ ಕಾರ್ಯಗಳನ್ನು ಮಾಡಿಸುವುದು ಅತ್ಯಾವಶ್ಯಕವಾಗಿದೆ.

ಹೋಬಳಿ ಮತ್ತು ತಾಲ್ಲೂಕು ಮುಖ್ಯಸ್ಥಳಗಳಲ್ಲಿ ಅಧಿಕಾರಿಗಳಿಗೆ ಮನೆಗಳನ್ನು ಕಟ್ಟಿಕೊಡತಕ್ಕದ್ದು ಪ್ರಥಮ ಕರ್ತವ್ಯ. ಈ ಕಾರ್ಯಕ್ಕಾಗಿ ಪ್ರತಿಯೊಂದು ವರ್ಷದಲ್ಲಿಯೂ ಸಲ್ಪ ಹಣವನ್ನೊದಗಿಸುತ್ತಾರೆ. ಯಾವ ತಾಲ್ಲೂಕಿನಲ್ಲಿಯೂ officials colony ಕಟ್ಟುತ್ತಿಲ್ಲ. ಕೆಲವು ತಾಲ್ಲೂಕು ಮುಖ್ಯಸ್ಥಳಗಳಲ್ಲಿ ಅಮಲ್ದಾರರಿಗೆ ವಾಸಕ್ಕೆ ಮನೆಗಳಿಲ್ಲದೆ ಅವರು ಛತ್ರಗಳಲ್ಲಿರತಕ್ಕ ಪರಿಸ್ಥಿತಿ ಇದೆ. ನಾವು ಮನೆಗಳನ್ನು ಕಟ್ಟಿಸಿದರೆ ಅವಕ್ಕೆ ಅಧಿಕಾರಿಗಳು ಕೊಡುವ ಬಾಡಿಗೆಯಿಂದ ನಷ್ಟವಾಗುವುದಿಲ್ಲ. ಆದ್ದರಿಂದ ಪ್ರತಿಯೊಂದು ತಾಲ್ಲೂಕ್ ಮುಖ್ಯಸ್ಥಳದಲ್ಲಿರತಕ್ಕ ಪ್ರತಿಯೊಬ್ಬ ಅಧಿಕಾರಿಗೂ ಮತ್ತು ಹೋಬಳಿಯಲ್ಲಿರುವ ಡಾಕ್ಟರುಗಳಿಗೂ ಮನೆಗಳನ್ನು ಕಟ್ಟಿಕೊಡುವ ವ್ಯವಸ್ಥೆಯನ್ನು ಮಾಡಬೇಕು. ಇದಕ್ಕಾಗಿ ಈ ಸಲವಾದರೂ ಒದಗಿಸಿರುವ ಹಣದಲ್ಲಿ ಎಷ್ಟರಮಟ್ಟಿಗೆ ಕೆಲಸವಾಗುತ್ತದೆಯೋ ಅಷ್ಟನ್ನು ಮಾಡಿಸಲು ನಿಗಾ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

Sri C. J. MUCKANNAPPA.—Will you kindly let us know what should be the cost of each building that is constructed in the taluk or hobli headquarter for the revenue inspectors, doctors, etc.

ಶ್ರೀ ಎಸ್. ಮುನಿರಾಜು.—ಸುಮಾರು ನಾಲ್ಕು ಸಾವಿರದಿಂದ ಆರು ಸಾವಿರ ರೂಪಾಯಿ ಆಗಬಹುದು. ಈಗ village level workers ಗೆ ನಾಲ್ಕು ಸಾವಿರ ರೂಪಾಯಿಗಳಲ್ಲಿ ಒಂದು ಕಟ್ಟಡವನ್ನು ಕಟ್ಟುತ್ತಿದ್ದೇವೆ.

ಶ್ರೀ ಎಂ. ರಾಮಪ್ಪ.—ಈ ಹಣದಲ್ಲ ಒಳ್ಳೆಯ ಮನೆಯನ್ನು ಕಟ್ಟಲು ಸಾಧ್ಯವೇ?

ಶ್ರೀ ಎಸ್. ಮುನಿರಾಜು.—ಹಳ್ಳಿಗಾಡಿನಲ್ಲಿ ಅಷ್ಟರಮಟ್ಟಿಗೆ ಮನೆ ಇದ್ದರೆ ಸಾಕು. ಹೈಸ್ಕೂಲ್ ಮುಖ್ಯೋಪಾಧ್ಯಾಯರೊಬ್ಬರು ಶಿವಮೊಗ್ಗದಲ್ಲಿ, canteen building ನಲ್ಲಿ ಯಾವುದೋ ಒಂದು ಛತ್ರದಲ್ಲಿ ಒಂದು ಭಾಗದಲ್ಲಿದ್ದೇನೆಂದು ಹೇಳಿದರು. ಆ ಹಳ್ಳಿಯಲ್ಲಿ ನನಗೆ ಅದೇ ದೊಡ್ಡಮನೆ, ಸರ್ಕಾರದವರು ಅಲ್ಲಿಂದ ಬಿಡಿಸಬೇಕೆಂದಿದ್ದಾರೆ ಎಂದು ಹೇಳಿದರು. ನಾಲ್ಕು ಸಾವಿರ ರೂಪಾಯಿಗಿಂತ ಹೆಚ್ಚು ಬೆಲೆ ಕಟ್ಟಡಕ್ಕೆ ಬೀಳುವುದಿಲ್ಲ ವೆಂಬುದನ್ನು ಶ್ರೀಯುತ ರಾಮಪ್ಪನವರೂ ತಿಳಿದು ಕೊಂಡಿದ್ದಾರೆಂದು ಕಾಣುತ್ತದೆ.

Sri M. RAMAPPA.—It is not the policy of the Government to build tiled houses for Government servants. They will build only R.C.C. houses.

Sri C. J. MUCKANNAPPA.—That is why I wanted to know. If the cost is between four and six thousand rupees, it cannot be R.C.C. buildings.

ಶ್ರೀ ಎಸ್. ಮುನಿರಾಜು.—ನಾಲ್ಕರಿಂದ ಆರು ಸಾವಿರ ರೂಪಾಯಿಗಳಲ್ಲಿ R.C.C. ಕಟ್ಟಡವನ್ನು ಕಟ್ಟಬಹುದು. ಸರ್ಕಾರದವರು ಈ ವಿಷಯದ ಕಡೆ ಗಮನ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಬಿಲ್ಡಿಂಗ್ಸ್ ಡಿವಿಷನ್ನಲ್ಲಿ ಪಾಠಶಾಲೆಯ ಕಟ್ಟಡ, ಆಸ್ಪತ್ರೆ ಕಟ್ಟಡ, ಇವುಗಳನ್ನು ಕಟ್ಟುವುದರಲ್ಲಿ ಕೆಲಸ ಬಹಳ ಹಿಂದುಳಿದಿದೆ. ವಿದ್ಯಾಖಾತೆಯ ಮಂತ್ರಿಗಳನ್ನು

ಕೇಳಿದರೆ, ಪಬ್ಲಿಕ್ ವರ್ಕ್ಸ್ ಮಂತ್ರಿಗಳಿಗೂ ಸಂಬಂಧಿಸಿದ್ದು ಎಂದು ಹೇಳುತ್ತಾರೆ. ಮಾನ್ಯ ಮಂತ್ರಿಗಳು ಈ ಕಡೆ ಹೆಚ್ಚು ನಿಗಾ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಇಲಾಖೆಯಲ್ಲಿ ಕೇಂದ್ರದ ಸಹಾಯದಿಂದ ಆಗಬೇಕಾದ ಯೋಜನೆಗಳು ಸರಿಯಾಗಿ ನಡೆಯುತ್ತಿಲ್ಲ. ಕೇಂದ್ರ ಸರ್ಕಾರದೊಡನೆ ಅನೇಕ ವಿಷಯಗಳಲ್ಲಿ ನಾವು ಇತರ ಪ್ರಾಂತಗಳವರಂತೆಯೇ ವ್ಯವಹರಿಸಬೇಕು. ಇದಕ್ಕಾಗಿ ನಮ್ಮ ಇಂಜಿನಿಯರುಗಳು ಎಷ್ಟೋ ವಿಷಯಗಳನ್ನು ಒದಗಿಸಿ ಕೊಳ್ಳಬೇಕಾಗಿದೆ. ನಮ್ಮ ವಿಷಯಗಳನ್ನು ಕೇಂದ್ರದ ಮುಂದೆ ಸರಿಯಾದ ರೀತಿಯಲ್ಲಿಟ್ಟು ಫಲಪ್ರದವಾಗುವಂತೆ ಮಾಡುವ ವಿಷಯದಲ್ಲಿ ಮತ್ತು ಕೇಂದ್ರದಿಂದ ಹಣವನ್ನು ಕೊಟ್ಟಿದ್ದಾರೆಯೇ, ಅಥವಾ ಕೆಲಸ ಕಾರ್ಯಗಳನ್ನು ಮಾಡಿದ್ದಾರೆಯೇ, ಗುರುತರವಾದ ಜವಾಬ್ದಾರಿಯಿಂದ ನಡೆದುಕೊಂಡು ಹೋಗುತ್ತಾರೆಯೇ ಎನ್ನುವುದನ್ನು ನೋಡಬೇಕು. ಇದರಕಡೆಗೆ ಹೆಚ್ಚು ಗಮನ ಕೊಟ್ಟು ಕೆಲಸ ಕಾರ್ಯಗಳನ್ನು ಮಾಡಲು, ಕೇಂದ್ರದೊಡನೆ ವ್ಯವಹರಿಸಲು ಯಾರಾದರೂ ಒಬ್ಬ ಚೀಫ್ ಇಂಜಿನಿಯರಿಗೆ ಜವಾಬ್ದಾರಿಯನ್ನುವಹಿಸಿ, ನಮ್ಮ ಭಾಗಕ್ಕೆ ಎಷ್ಟು ಬರುತ್ತಿದೆ, ಹೆಚ್ಚಿಗೆ ಬರುವುದಕ್ಕೆ ಏನು ಮಾಡಬೇಕೆಂಬುದನ್ನು ನೋಡಿ ಕೆಲಸ ಕಾರ್ಯಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗುತ್ತಾರೆಂದು ಭಾವಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಕೆ. ಬೊಮ್ಮೇಗೌಡ (ಕೃಷ್ಣರಾಜಪೇಟೆ).- ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರುವ ಡಿಮಾಂಡ್‌ಗಳನ್ನು ಒಪ್ಪಿಕೊಳ್ಳುತ್ತ ನನ್ನ ಎರಡು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ. ನಮ್ಮ ದೇಶದ ಉತ್ಪತ್ತಿಯಲ್ಲಿ ಅರ್ಧ, ಮುಕ್ಕಾಲು ಭಾಗವನ್ನು ಈ ಇಲಾಖೆ ಖರ್ಚು ಮಾಡುತ್ತಿದೆ. ಏಳಿಗೆಗೆ ಆಗಬೇಕಾದ ಕೆಲಸಗಳನ್ನು ನಡೆಸಬೇಕೆಂಬ ಸದುದ್ದೇಶದಿಂದ ಅಪಾರವಾದ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಹಾಗೆ ಖರ್ಚು ಮಾಡುವಾಗ ಅದರ ಫಲ ಸರಿಯಾಗಿ ಬರುತ್ತಿದೆಯೇ ಎನ್ನುವುದನ್ನು ನೋಡಬೇಕು. ಈಗಾಗಲೇ ಒಂದನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಬಹಳ ಕಾರ್ಯಗಳಲ್ಲಿ ತೊಡಗಿದ್ದೇವೆ. ಅದರ ಪ್ರತಿಫಲ ಇನ್ನೂ ನಮಗೆ ಸಿಕ್ಕಿಲ್ಲ. ನಾವು ಆಗಾಗ್ಗೆ ಖರ್ಚು ಮಾಡುತ್ತಿರುವುದರ ಪ್ರತಿಫಲ ಸರಿಯಾಗಿ ದೇಶಕ್ಕೆ ಒದಗುತ್ತಿದೆಯೇ ಎಂಬುದನ್ನು ನೋಡಿಕೊಳ್ಳುವುದು ಒಳ್ಳೆಯದು ಎಂದು ನಾನು ತಿಳಿದುಕೊಂಡಿದ್ದೇನೆ. ಖರ್ಚು ಮಾಡುವಾಗ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡದೆಇದ್ದರೆ ದೇಶವನ್ನು ಕಟ್ಟುವುದಕ್ಕಾಗುವುದಿಲ್ಲ. ಆದರೆ ಖರ್ಚು ಸರಿಯಾದ ರೀತಿಯಲ್ಲಿ ಸರಿಯಾದ ದಾರಿಯಲ್ಲಿ ಆಗುತ್ತಿದೆಯೇ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಉದಾಹರಣೆಗೆ ನಾವು ಅನೇಕ ಕಾರ್ಯಗಳನ್ನು ಕಂಟ್ರಾಕ್ಟರುಗಳ ಮೂಲಕ ನಡೆಸುತ್ತಿದ್ದೇವೆ. ಪಬ್ಲಿಕ್ ವರ್ಕ್ಸ್ ಕೆಲಸಗಳನ್ನೆಲ್ಲಾ ಕಂಟ್ರಾಕ್ಟರುಗಳಿಗೇ ವಹಿಸಲಾಗುತ್ತಿದೆ. ಆದರೆ ನಮ್ಮ ಮುಂದೆ ಕಟ್ಟಿರುವ ಕಟ್ಟಡಗಳು ಕೆಲವಾರು ವರ್ಷಗಳಾದ ಕೂಡಲೆ ಶಿಥಿಲವಾಗುತ್ತಿವೆ, ಎರಡು ಮೂರು ವರ್ಷಗಳು ಕೂಡ ಸರಿಯಾಗಿರುವುದಿಲ್ಲ. ಹೀಗಾಗಲು ಕಾರಣವೇನೆಂಬುದು ಗೊತ್ತಾಗಬೇಕಾಗಿದೆ. ಹೀಗಾಗುವುದನ್ನು ತಡೆಗಟ್ಟಲು ಏನು ಮಾಡಬೇಕು, ಯಾವರೀತಿ ಮಾಡಿದರೆ ನೀವು ಮಾಡುವ ಕೆಲಸ ಕಾರ್ಯ ದೇಶದಲ್ಲಿ ಶಾಶ್ವತವಾಗಿ ಕೆಲವಾರು ವರ್ಷಗಳಾದರೂ ಇರುತ್ತದೆ ಎಂಬುದನ್ನು ಇಲಾಖೆಯವರು ಯೋಚನೆ ಮಾಡತಕ್ಕದು ಬಹಳ ಮುಖ್ಯವಾಗಿದೆ. ಕಂಟ್ರಾಕ್ಟಿಗೆ ಕೊಡುವ ವಿಧಾನದಲ್ಲೇ ಬಹಳ ನ್ಯೂನತೆಯಿದೆಯೆಂದು ನಾನು ಹೇಳಬಲ್ಲೆ. ದೇಶದಲ್ಲಿ ನಿರುದ್ಯೋಗ ಸಮಸ್ಯೆಯಿರುವಾಗ ಪ್ರತಿಯೊಬ್ಬರೂ ಯಾವುದಾದರೂ ಒಂದು ಕೆಲಸ ಕೈಕೊಳ್ಳಬೇಕಾಗಿದೆ. ನಮ್ಮಲ್ಲಿ ಕಂಟ್ರಾಕ್ಟರುಗಳು ಹೇರಳವಾಗಿದ್ದಾರೆ; ಇರಲಿ, ಆದರೆ ಟೆಂಡರ್ ಕೊಡುವಾಗ ಷೆಡ್ಯೂಲ್ ದರಗಳಿಗಿಂತ ಕಡಮೆ ದರ ನಮೂದಿಸುತ್ತಿದ್ದಾರೆ. ಷೆಡ್ಯೂಲ್‌ನಲ್ಲಿ ಇದು ಸರಿಯಾದ ದರವೆಂದು ಸೈಂಟಿಫಿಕ್ಕಾಗಿ ನಿರ್ಧಾರ ಮಾಡಿದ ಮೇಲೆ ಅದಕ್ಕಿಂತಲೂ ಕಡಮೆ ದರಕ್ಕೆ ಟೆಂಡರು ಬಂದರೆ ಸರ್ಕಾರ ಒಪ್ಪಿ ಕಂಟ್ರಾಕ್ಟ್ ಕೊಡುತ್ತಿದೆ. ಹೀಗಿರುವಾಗ ಟೆಂಡರು ಕೊಟ್ಟವರು ಹೇಗೆ ಲಾಭ ಸಂಪಾದನೆ ಮಾಡಬಲ್ಲರೆಂಬುದನ್ನು ಪರಿಶೀಲಿಸಬೇಕು, ಇದು ಬಹಳ ಮುಖ್ಯವಾದುದು. ದುಡ್ಡು ಉಳಿತಾಯವಾಯಿತೆಂದು ಕಡಮೆ ಟೆಂಡರುಬಂದಾಗ ಹೆಮ್ಮೆ ಪಡುವುದು ಈ ದಿವಸ ಸೂಕ್ತವಲ್ಲ. ಉಳಿತಾಯ ಯಾವಾಗ ಸಾಲಿಡ್ಯಾರಿಟಿ ಆಫ್ ವರ್ಕ್ ಹೇಗಿದೆಯೆಂದು ವಿಮರ್ಶೆ ಮಾಡಬೇಕಾಗಿದೆ. ಕಂಟ್ರಾಕ್ಟ್ ಕೊಡುವ ಪದ್ಧತಿಯಲ್ಲಿ ಸ್ವಲ್ಪ ಬದಲಾವಣೆ ಯಾಗಬೇಕು. ಇಂಡಿವಿಜುಯಲ್ ಕಂಟ್ರಾಕ್ಟರುಗಳಿಗೆ ಕಂಟ್ರಾಕ್ಟ್ ಕೊಡುವುದಕ್ಕಿಂತ ಸಂಘ ಸಂಸ್ಥೆಬೆಳೆಸಿ ಅವುಗಳಿಗೆ ಕಂಟ್ರಾಕ್ಟ್ ಕೊಡುವುದು ಒಳ್ಳೆಯದು. ಜಾಯಿಂಟ್ ಸ್ಟಾಕ್ ಕಂಪನಿಗಳಿಗೆ ಅಥವಾ ಕೋ-ಆಪರೇಟಿವ್ ಬೇಸಿಸ್ ಮೇಲೆ ನಡೆಯುವುದಕ್ಕೆ ಅವುಗಳ ಬೈಲಾ ಏನಿದೆ ನೋಡಿ ಅವುಗಳಿಗೆ ಈ ಕೆಲಸಗಳನ್ನು ವಹಿಸುವುದಾದರೆ ಅನೀತಿಗೆ ಹೆಚ್ಚು ಅವಕಾಶವಾಗುವುದಿಲ್ಲ. ಹೇಗೆಂದರೆ, ಅಲ್ಲಿ ಯಾವ ಇಂಡಿವಿಜುಯಲ್ ಇಂಟರೆಸ್ಟ್ ಇರುವುದಿಲ್ಲ, ಸಂಘ ಸಂಸ್ಥೆಗಳು ಕೆಲಸ ನಡೆಸುವಾಗ ಇಲಾಖೆಯವರು ಪರ್ಸೆಂಟೇಜ್ ಕೊಡಿ ಎಂದು ಕೇಳುವುದಕ್ಕಾಗುವುದಿಲ್ಲ; ಲೆಕ್ಕಾಚಾರವಾಗಿ ಕೆಲಸ ನಡೆಯುತ್ತದೆ. ಈ ರೀತಿ ಮಾಡುವುದು ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಬೇಕಾದಷ್ಟು ಪೋಲಾಗುತ್ತಿದೆ, ನಷ್ಟವಾಗುತ್ತಿದೆ. ಈ ನಷ್ಟವನ್ನು ತಾವು ಯಾವುದಾದರೂ ರೀತಿಯಲ್ಲಿ ತಡೆಗಟ್ಟದಿದ್ದರೆ, ಈಗಿರುವ ರೀತಿಯಲ್ಲೇ ಖರ್ಚು ಮಾಡಿದರೆ ಸಾಕಷ್ಟು ಪ್ರಯೋಜನವೂ ಆಗುವುದಿಲ್ಲ, ನಮ್ಮ ದೇಶಕ್ಕೆ ಅದರ ಪ್ರತಿಫಲ ದೊರೆಯುವುದಿಲ್ಲ. ಯಾವ ಒಂದು ಸುಖೀ ರಾಜ್ಯ ನಿರ್ಮಾಣ ಮಾಡಬೇಕೆಂದಿರುವಾಗ ಈಗಿರುವ ಪದ್ಧತಿಯಿಂದ ಅನ್ಯಾಯವಾಗುತ್ತಿದೆಯೆಂದು ಹೇಳುತ್ತೇನೆ. ಆದುದರಿಂದ ಕಂಟ್ರಾಕ್ಟ್ ಕೊಡುವ ಪದ್ಧತಿಯಲ್ಲಿ ಸ್ವಲ್ಪ ಬದಲಾವಣೆ ಮಾಡಿ ಯಾವುದಾದರೂ ಒಂದು ಹೊಸ ರೀತಿಯಿಂದ ನಡೆಸಬೇಕು. ಪರ್ಸೆಂಟೇಜ್ ವಿಚಾರ ಓಪನ್ ಸೀಕ್ರೆಟ್, ಯಾರಿಗೂ ಗೊತ್ತಿಲ್ಲದ ವಿಷಯವಲ್ಲ. ಯಾವ ಕಂಟ್ರಾಕ್ಟರಾದರೂ ಇಂಜಿನಿಯರಿಗೆ ಪರ್ಸೆಂಟೇಜ್ ಕೊಡುವುದಿಲ್ಲವೆಂದು ಹೇಳಿದರೆ ಅದು ಒಪ್ಪುವ ಮಾತಲ್ಲ. ಒಬ್ಬಿಬ್ಬರು, ಸೇಕಡ 5 ಅಥವಾ 10 ಮಂದಿ ಪ್ರಾಮಾಣಿಕರಿರಬಹುದು. ಈ ರೀತಿ ಇರುವುದರಿಂದ ದೇಶಕ್ಕೆ ನಷ್ಟವಾಗುತ್ತಾ ಇದೆಯೇ ಹೊರತು ಫಾಯಿದೆಯಿಲ್ಲ. ಆದುದರಿಂದ ಕೆಲಸ ಮಾಡುವ ವಿಧಾನವನ್ನು ಲೋಕೋಪಯೋಗಿ ಇಲಾಖಾ ಅಧಿಕಾರಿಗಳು ದಯೆಯಿಟ್ಟು ಸ್ವಲ್ಪ ಬದಲಾವಣೆ ಮಾಡುವುದು ಆವಶ್ಯಕ.

Sri H. M. CHANNABASAPPA.—For your information, Government have passed orders to the effect that, where

(SRI H. M. CHANNABASAPPA)

things are equal, as far as possible Co-operative Societies and such other institutions may be encouraged.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈಗ ಮೈನರ್ ಇರಿಗೇಷನ್ ಸ್ಕೀಂ ಬಹಳ ಮುಖ್ಯವಾದುದು. ದೇಶದ ಸಂಪತ್ತನ್ನು ಬೆಳೆಸಬೇಕು, ದೇಶಾಭಿವೃದ್ಧಿ ಮಾಡಬೇಕು ಎಂಬುದೇ ಅದರ ಮೂಲೋದ್ದೇಶ. ಆದರೆ ಇವತ್ತಿನ ದಿವಸ ಮೈನರ್ ಇರಿಗೇಷನ್ ಸ್ಕೀಂ ಜಾರಿಗೆ ಬಂದಮೇಲೆ ಎಷ್ಟು ಜಮೀನು ವ್ಯವಸಾಯಕ್ಕೆ ಬಂದಿದೆ, ಉತ್ಪತ್ತಿ ಎಷ್ಟು ಹೆಚ್ಚಾಗಿದೆ ಎಂದು ಅಂಕಿಅಂಶ ಕೊಟ್ಟರೆ ಪ್ರಯೋಜನವೇನು? ಕಾರ್ಯತಃ ಏನೂ ಕಾಣುತ್ತಿಲ್ಲ. ಎಷ್ಟೋ ಪ್ರಾಜೆಕ್ಟುಗಳಿಗೆ ಕೆರೆಕಟ್ಟೆಗಳಿಗೆ ಸರ್ವೆ, ಅಂದಾಜು ಆಗುತ್ತದೆ. ಆದರೆ ಮಂಜೂರಾಗಿ ಬರಬೇಕಾದರೆ ಮೇಲೆ ಕೆಳಗೆ ಹೋಗುವುದು ಬರುವುದು ಹೀಗಾಗಿ ಕೊನೇ ಪಕ್ಷ 2-3 ವರ್ಷಗಳಾಗುತ್ತವೆ. ಶ್ರೀ ವೀರಪ್ಪನವರ ಪ್ರಶ್ನೆ ನನಗೆ ಗೊತ್ತಿದೆ. ಅವರು ಎಲದಳ್ಳ ಪ್ರಾಜೆಕ್ಟ್ ಮಾಡಬೇಕೆಂದು 7 ವರ್ಷಗಳಿಂದ ಸಲಹೆ ಕೊಟ್ಟರು. ಅಂದಾಜಾಗಿ 2 ವರ್ಷ ಆಗಿದೆ. 30-35 ಸಾವಿರ ರೂಪಾಯಿಗಳಿಗೆ ಆಗಿರುವ ಆ ಒಂದು ಸಣ್ಣ ಅಂದಾಜು ಇನ್ನೂ ಮಂಜೂರಾಗಿಲ್ಲ. ಅಲ್ಲಿ ಬಹಳ ಬರಗಾಲಕ್ಕೆ ತುತ್ತಾಗುವ ಪ್ರದೇಶವಿದೆ. ನ್ಯಾಯಬದ್ಧವಾಗಿ ಆ ಪ್ರಾಜೆಕ್ಟ್ ಆಗಬೇಕಾಗಿದೆ. ಅಲ್ಲಿ ಕಷ್ಟವೆಷ್ಟಿದೆಯೆಂದು ಹೇಳಬೇಕಾಗಿಲ್ಲ. ಎರಡು ವರ್ಷದಿಂದ ಇಲಾಖೆ ಏನು ಮಾಡುತ್ತಿದೆ? ಯಾವಾಗ ಮಂಜೂರಾಗುವುದು? ಆದರ ಜವಾಬ್ದಾರಿ ಹೊರುವುದಕ್ಕೆ ಯಾರೂ ತಯಾರಾಗಿಲ್ಲ. ಅಸಿಸ್ಟೆಂಟ್ ಇಂಜನಿಯರಿಗೆ ಅದನ್ನು ಮಂಜೂರುಮಾಡುವ ಅಧಿಕಾರವಿದ್ದರೂ ಸಹ ತಮಗೇಕೆ ಆ ಜವಾಬ್ದಾರಿ ಎಂದು ಮೇಲಕ್ಕೆ ಕಳುಹಿಸಿ ಬಿಡುತ್ತಾರೆ. ಈ ವಿಚಾರ ಎಗ್ಸಿಕ್ಯೂಟಿವ್ ಇಂಜನಿಯರು, ಸೂಪರಿಂಟೆಂಡಿಂಗ್ ಇಂಜನಿಯರು ಮುಂತಾದ ಮೇಲಧಿಕಾರಿಗಳಿಗೆ ಗೊತ್ತಾಗುವುದಿಲ್ಲವೋ ಏನೋ. ಅವರು ಏನಾದರೂ ಕ್ವೈರಿ ಹಾಕುತ್ತಾರೆ. ಹೀಗಾಗಿ ಒಂದೊಂದು ರಿಕಾರ್ಡು ಕೂಡ ನಾಲ್ಕೈದುಸಾರಿ ಮೇಲಿನ ಆಫೀಸಿಗೂ ಕೆಳಗಿನ ಆಫೀಸಿಗೂ ಓಡಾಡುವಂತೆ ಕ್ವೈರಿಹಾಕಿ ವಾಪಸು ಕಳುಹಿಸುವುದೇಕೆ? ಬಹಳಮಟ್ಟಿಗೆ ಹೀಗೆ ನಡೆಯುತ್ತಿದೆ. ಹೀಗಾದರೆ ಎಷ್ಟು ನಿಧಾನವಾಗುತ್ತದೆಂಬುದನ್ನು ಆಲೋಚಿಸಬೇಕು.

Sri H. M. CHANNABASAPPA—It is on account of the fact that young men that we get fresh from the College are all raw men and they all lack in practical experience. But there are experienced Assistant Engineers; they should see whether it is correct or not. A man with ten years service is not a raw man.

ಶ್ರೀ ಎಂ. ಕೆ. ಬೊಮ್ಮೇಗೌಡ.—ಒಂದೊಂದು ಆಫೀಸಿನಲ್ಲಿ ಮೂರು ಮೂರು ಸಾರಿ ಅಬಸರ್ವೇಷನ್ನಿಗಾಗಿ ಎಂದು ಎಸ್ಟಿಮೇಟುಗಳು ಬರುತ್ತಿದ್ದರೆ ಹೇಗೆ? ಒಂದೇ ಸಾರಿ ಎಲ್ಲವನ್ನೂ ಪರಿಶೀಲನೆ ಮಾಡಿ ಏಕೆ ಕಳುಹಿಸಬಾರದು? ಉದ್ದೇಶಪೂರ್ವಕವಾಗಿ ಆಗಿದ್ದರೆ, ಅಂತಹುದನ್ನೇನಾದರೂ ಎನ್‌ಕ್ವೈರಿ ಮಾಡಿದ್ದೀರಾ? ಈ ರೀತಿಯಾಗಿ ನೀವು ದೇಶದಲ್ಲಿ ಬೇಕಾದಷ್ಟು ಎಸ್ಟಾಬ್ಲಿಷ್‌ಮೆಂಟ್ ಇಟ್ಟುಕೊಂಡು ಬೇಕಾದಷ್ಟು ಸಂಬಳ ಕೊಟ್ಟುಕೊಂಡು ನಿರೀನೋಪಾವಿಯಲ್ಲಿ ಧಾರಕಾರ ದುಡ್ಡು ಹರಿಯುವಂತೆ ಕೊಡುತ್ತಿದ್ದರೂ ದೇಶದ ಅಭಿವೃದ್ಧಿ ಕಾರ್ಯಗಳು ಆಗುತ್ತಿಲ್ಲ. ಸರಕಾರದವರು ಮತ್ತು ಇದಕ್ಕೆ ಸಂಬಂಧಪಟ್ಟ ಮುಖ್ಯ ಅಧಿಕಾರಿಗಳು ಈ ವಿಚಾರದಲ್ಲಿ ಒಂದು ವ್ಯವಸ್ಥೆಯನ್ನು ಮಾಡಿ ಜನಗಳಿಗೆ ಹೆಚ್ಚಿನ ಅನ್ಯಾಯವಾಗದಂತೆ ನಿಧಾನವಾಗುವುದನ್ನು ತಪ್ಪಿಸಲು ತಕ್ಕ ಕಾರ್ಯಕ್ರಮವನ್ನು ನಿರ್ಧರಿಸಬೇಕೆಂದು ಹೇಳುತ್ತೇನೆ. ಹಾಗಾದರೆ ದೇಶದಲ್ಲಿ ಹೆಚ್ಚಿನ ಬೆಳೆಗಳನ್ನು ಮಾಡಿ ಈಗಿರತಕ್ಕ ಆಹಾರದ ಕೊರತೆ ನೀಗಲು ಅನುಕೂಲವಾಗುತ್ತದೆಯೇ ಹೊರತು. ಬರೀ ಸ್ಕೀಮುಗಳನ್ನು ಹಾಕಿಕೊಂಡು ಅದಕ್ಕಾಗಿ ಹೆಚ್ಚಿನ ದುಡ್ಡನ್ನು ಖರ್ಚು ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ ಎಂದು ನಾನು ಹೇಳುತ್ತೇನೆ.

ಸ್ವಾಮಿ, ಮೈನರು ಇರಿಗೇಷನ್ನಿನ ವಿಚಾರದಲ್ಲಿ ಈಗಾಗಲೇ ಅನೇಕ ಮಿತ್ರರು ಮಾತನಾಡಿದ್ದಾರೆ. ದೇಶದಲ್ಲೆಲ್ಲಾ ಈ ಮೈನರು ಇರಿಗೇಷನ್ನಿಗಾಗಿ ಎಲ್ಲ ಕಡೆಗಳಲ್ಲಿಯೂ ನೀರಾವರಿ ಸಪ್ತಾಹಗಳು ಆಗುತ್ತಿವೆ. ನಾನು ಮೊದಲೇ ಹೇಳಿದ ಹಾಗೆ ದೇಶದಲ್ಲಿರುವ ಎಷ್ಟು ಕೆರೆಕಟ್ಟೆಗಳಿಂದ ಆಹಾರ ದವಸಗಳು ಬರುತ್ತಿವೆ ಎನ್ನುವ ವಿವರಗಳನ್ನು ತೋರಿಸುವ ಒಂದು ಸ್ಟಾಟಿಸ್ಟಿಕ್ಸ್ ತಯಾರುಮಾಡಿ ಅದನ್ನು ಈ ಸಭೆಯ ಮಾನ್ಯ ಸದಸ್ಯರಿಗೆಲ್ಲಾ ಹಂಚಬೇಕೆಂದು ನಾನು ಪ್ರಾರ್ಥನೆಮಾಡುತ್ತೇನೆ.

ಇನ್ನು ರೋಡುಗಳ ವಿಚಾರ. ನಮ್ಮ ಜಿಲ್ಲೆಯನ್ನೇ ತೆಗೆದುಕೊಳ್ಳೋಣ. 1949ನೇ ಇಸವಿಯಲ್ಲಿ ಸೆಂಟ್ರಲ್ ಗವರ್ನಮೆಂಟಿನಿಂದ ಬಂದ ಕೆಲವು ಸ್ಕೀಮುಗಳ ಪ್ರಕಾರ ಒಂದು ರೋಡು ಮಂಜೂರಾಗಿತ್ತು. ಅದು ಚಿನಕುರಳಿಯಿಂದ ಬೊಕನಕೆರೆ ಮಾರ್ಗವಾಗಿ ಅಕ್ಕಿಹೆಬ್ಬಾಳಿಗೆ ಹೋಗುವ ರೋಡು. ಇದರ ಬಗ್ಗೆ ಎಷ್ಟೋ ಸಾರಿ ಅಧಿಕಾರಿಗಳಿಗೆ ಕಾಗದ ಬರೆದಿದ್ದಾಯಿತು. ಮಂತ್ರಿಗಳ ಗಮನಕ್ಕೂ ತಂದಿದ್ದಾಯಿತು ಮತ್ತು ಒಂದು ಸಾರಿ ಈ ಸಭೆಯಲ್ಲಿ ಇದರ ಬಗ್ಗೆ ಇಂಟರಪೆಲೇಷನ್ನನ್ನು ಕೂಡ ಹಾಕಿದ್ದಾಯಿತು. ಇಷ್ಟಾದರೂ ಕೂಡ ಈ ರೋಡು ಹಾಗೇನೇ ನಿಂತಿದೆ. ಇದೂ ಅಲ್ಲದೆ ಹೇಮಾವತಿ ನದಿಗೆ ಮಂದಗೆರೆ ಬಳಿ ಒಂದು ಸೇತುವೆಯನ್ನು ಕಟ್ಟಬೇಕೆಂದು ಎಸ್ಟಿಮೇಟಾಗಿ ಹತ್ತು ಹದಿನೈದು ವರ್ಷಗಳಾಗಿದ್ದರೂ ಅದು ಇನ್ನೂ ಕಾರ್ಯಗತವಾಗಲಿಲ್ಲ. ಮಾನ್ಯ ಸಚಿವರನ್ನು ಈ ಬಗ್ಗೆ ಕೇಳಿದಾಗ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ನನ್ನು ಮಾಡಿ ಬಿಡುತ್ತೇವೆಂದು ಹೇಳಿಬಿಟ್ಟರು. ಈಗ ಅದೂ ಕೂಡ ಆಗದೆ ಪುನಃ ಅಬಸರ್ವೇಷನ್ನಿಗಾಗಿ ಬಂದಿದೆ ಎಂದು ಕೇಳುತ್ತೇನೆ. ಈ ವಿಚಾರ ತಮಗೂ ಗೊತ್ತಿದೆ ಮತ್ತು ಅನೇಕ ಜನಗಳೂ ಬಂದು ತಮ್ಮಲ್ಲೇ ಮನವಿ ಮಾಡಿಕೊಂಡಿದ್ದಾರೆ. ಯಾವುದಾದರೂ ಜವಾಬ್ದಾರಿಯಿಂದ ಅಲ್ಲಿನ ಜನಗಳ ಕುಂದುಕೊರತೆಯನ್ನು ತಿಳಿದು ಅರ್ಜಿ ಹಾಕಿದರೂ ಅದಕ್ಕೆ ಉತ್ತರವಾಗಿ "It is unnecessary, it cannot be be taken up" ಎಂದು ಈ ರೀತಿಯಾಗಿ ಉತ್ತರವನ್ನು ಕಳುಹಿಸಿಕೊಡುತ್ತಾರೆ. ತಮಗೆ ನಮ್ಮ ತಾಲ್ಲೂಕಿನ ಸಮಸ್ಯೆಗಳೆಲ್ಲಾ ಗೊತ್ತೇ ಇದೆ. ಈ ಹೇಮಾವತಿ ನದಿಗೆ ಈ ಸೇತುವೆಯನ್ನು ಕಟ್ಟಿಸಿಕೊಟ್ಟರೆ ಇಲ್ಲಿನ ಜನಗಳಿಗೆ ಎಷ್ಟೋ ಎಕರೆಗಳ ಭೂಮಿಯನ್ನು ಸಾಗುವಳಿ ಮಾಡಿಕೊಳ್ಳಲು ಅನುಕೂಲವಾಗುತ್ತದೆ.

ಅದನ್ನು ಮಂಜೂರು ಮಾಡಿಕೊಡಬೇಕೆಂದು ಪದೇ ಪದೇ ಕೇಳುತ್ತಿದ್ದರೂ ಅದಕ್ಕೆ ಅಧಿಕಾರಿಗಳು "It is unnecessary" ಎಂದು ಹೇಳುವುದು ಸರಿಯಲ್ಲ. ನಾನೂ ದೇಶದ ದುಡ್ಡನ್ನು ಜವಾಬ್ದಾರಿಯುತವಾಗಿ ಖರ್ಚು ಮಾಡಬೇಕೆಂದು ಹೇಳುತ್ತೇನೆ. unnecessary ಯಾಗಿ ಖರ್ಚನ್ನು ಮಾಡಿಸುವುದಕ್ಕೆ ನಾನು ಇಷ್ಟಪಡುವುದಿಲ್ಲ. ಇಂತಹ ಉಪಯುಕ್ತವಾದ ಕೆಲಸಗಳಿಗಾಗಿ ಖರ್ಚು ಮಾಡುವುದು unnecessary ಎಂದು ಹೇಳುವುದು ಸರಿಯಲ್ಲ; unnecessary ಎನ್ನುವ ಪದ ನ್ಯಾಯವಾಗಿಲ್ಲ. ಮಂತ್ರಿಗಳು ಪ್ರವಾಸ ಬಂದಿದ್ದಾಗ ಈ ಏರಿಯಾ ನೋಡಿದ್ದಾರೆ ಮತ್ತು ಇಲ್ಲಿನ ಜನ ಹೇಗೆ ಜೀವನ ಮಾಡುತ್ತಿದ್ದಾರೆ ಎನ್ನುವುದನ್ನು ನೋಡಿದ್ದಾರೆ. ಇಲ್ಲಿರುವ ಜನರು ಹೊಳೆಯನ್ನು ದಾಟಿಕೊಂಡು ಮೂರು ಮೈಲಿಗಳ ದೂರ ಹೋಗಿ ಅಲ್ಲಿಂದ ದಿನಸಿಗಳನ್ನು ತೆಗೆದುಕೊಂಡು ಬಂದು ಬಹಳ ಕಷ್ಟಪಡುತ್ತಿದ್ದಾರೆ. ಅಲ್ಲಿನ ಜನರಿಗೆ ಅವಶ್ಯಕವಾಗಿ ಒಂದು ಸೇತುವೆ ಬೇಕೆಂದು ಕೇಳುತ್ತಿದ್ದರೆ unnecessary ಎಂದು ಹೇಳಿ ಕುತ್ತಿಗೆ ಹಿಸುಕುವ ಧೋರಣೆಯಿಂದ ಮಾತನಾಡುವುದು ಸರಕಾರದ ನೀತಿಯೇ? ಇದರ ಸ್ಥಳವನ್ನು ಅಜಮಾಯಿಷಿ ಮಾಡಿ ಇದರ ಎಸ್ಟಿಮೇಟು ಬಂದು ಇದು ಮಾಡದೆ ಇರುವುದರಿಂದ ಅನಾನುಕೂಲಗಳಾಗಿವೆ ಎಂದು ಹೇಳುತ್ತಿದ್ದರೂ ಈ ರೀತಿಯಾಗಿ ಹೇಳುವುದು ನ್ಯಾಯವೇ ಎಂದು ನಾನು ತಮಗೆ ಕೇಳುತ್ತಿದ್ದೇನೆ. ನನಗೆ ಕೂಡ ಎಷ್ಟೋ ಸಾರಿ ಭರವಸೆ ಕೊಟ್ಟಿದ್ದಾರೆ. ಆದ್ದರಿಂದ ಹೇಮಾವತಿಗೆ ಕಟ್ಟೇಹಳ್ಳಿ ಹತ್ತಿರ ಒಂದು ಸೇತುವೆಯನ್ನು ಈಗಲಾದರೂ ಬೇಗನೆ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಸ್ವಾಮೀ, ನನ್ನ ಕಾಲ ಮುಗಿದು ಹೋಯಿತು. (ನಗು)

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಾವು ಅವರ ಕಾಲ ಮುಗಿಸುವುದಕ್ಕೆ ಸಿದ್ಧವಾಗಿಲ್ಲ, ಸ್ವಾಮಿ. (ನಗು)

ಶ್ರೀ ಎಂ. ಕೆ. ಬೊಮ್ಮೇಗೌಡ.—ನನಗೆ ಕೊಟ್ಟಿರ ತಕ್ಕ ಕಾಲ ಮುಗಿದು ಹೋಯಿತೆಂದು ಹೇಳಿದರೆ ಮಾನ್ಯ ಸದಸ್ಯರೇಕೆ ಈ ರೀತಿ ಗಲಾಟೆ ಮಾಡುತ್ತಿದ್ದಾರೆ. ನಾನಾಡುವ ಮಾತುಗಳು ಇಂಗ್ಲಿಷಲ್ಲ. ಅವರಿಗೆ ಗೊತ್ತಾಗುವುದಿಲ್ಲವೋ ಏನೋ! ನನಗೆ ಕೊಟ್ಟಿರುವ ಕಾಲ ಮುಗಿಯುತ್ತ ಬಂದಿದೆ ಎಂದು ಅಧ್ಯಕ್ಷರು ಹೇಳಿರುವುದರಿಂದ ಅವರ ಆಜ್ಞೆಗೆ ವಿರೋಧವಾಗಿ ಹೋಗುವುದು ಸರಿಯಲ್ಲ ಎಂದು ನಾನು ಇಷ್ಟು ಹೇಳಿ ಕುಳಿತುಕೊಳ್ಳುತ್ತೇನೆ.

ಡಾ|| ಬಿ. ಕೆ. ನಾಗೂರ್.—ಸ್ವಾಮಿ, ಎಷ್ಟು ಜನ ಇಂಡಿಪೆಂಡೆಂಟು ಸದಸ್ಯರಿಗೆ ಎಷ್ಟೆಷ್ಟು ಕಾಲಾವಕಾಶವನ್ನು ಕೊಡಲಾಗಿದೆ ಎನ್ನುವುದನ್ನು ತಿಳಿಸುತ್ತೀರಾ?

ಉಪಾಧ್ಯಕ್ಷರು.—ನಿನ್ನೆಯಿಂದ 136 ನಿಮಿಷಗಳ ಕಾಲ ತೆಗೆದುಕೊಂಡಿದ್ದಾರೆ.

5 P.M.

†ಶ್ರೀ ಬಿ. ಚಾಮಯ್ಯ (ಪಾಂಡವಪುರ).—ಈ ಹೊತ್ತು ನಾವು ಬಹಳ ಪ್ರಾಮುಖ್ಯವಾದ ಡಿಮ್ಯಾಂಡನ್ನು ಚರ್ಚೆಮಾಡುತ್ತಿದ್ದೇವೆ. ಈ ಸಭೆಯಲ್ಲೂ ಮತ್ತು ಮೇಲಿನ ಮನೆಯಲ್ಲೂ ಶರಾವತಿ ಪ್ರಾಜೆಕ್ಟಿನ ವಿಷಯದಲ್ಲಿ ಅನೇಕ ಟೀಕೆಗಳನ್ನು ಮಾಡಿದ್ದಾರೆ. ಆದರೆ ನಾವೆಲ್ಲಾ ಖುದ್ದಾಗಿ ಹೋಗಿ ನೋಡಿದ್ದೇವೆ; ಅಲ್ಲಿ ಕೆಲಸಗಳು ಎಷ್ಟು ಚುರುಕಾಗಿ ನಡೆಯುತ್ತಿವೆಯೆಂಬುದನ್ನು ಕಣ್ಣಾರೆ ನೋಡಿದ್ದೇವೆ. ಈ ಯೋಜನೆ ನಮ್ಮ ದೇಶಕ್ಕೆ ಅತ್ಯವಶ್ಯಕವಾದುದು. ನಮ್ಮ ದೇಶದಲ್ಲಿ ಇಂದು ವಿದ್ಯುತ್ತಿನ ಕೊರತೆ ಅಗಾಧವಾಗಿದೆ. ಮದ್ರಾಸಿನವರು ಈಗಾಗಲೇ ಕುಂದಾ ಮುಂತಾದ ಪ್ರಾಜೆಕ್ಟುಗಳನ್ನು ಕೈಕೊಂಡು ತಮ್ಮ ಕೊರತೆಯನ್ನು ನೀಗಿಕೊಂಡಿದ್ದಾರೆ. ಆದರೆ ನಮ್ಮಲ್ಲಿ ಇನ್ನೂ ಹೈಡ್ರೋ ಇಲೆಕ್ಟ್ರಿಕ್ ಪ್ರಾಜೆಕ್ಟ್ ಒಂದೂ ಆಗಿಲ್ಲ. ಆದ್ದರಿಂದ ಎಷ್ಟೇ ಆಕ್ಷೇಪಣೆ ಬಂದರೂ ಅವು ನಿರಾಧಾರವಾದುವುಗಳೆಂದು ಪರಿಗಣಿಸಿ, ಈ ಶರಾವತಿ ಪ್ರಾಜೆಕ್ಟನ್ನು ಮುಂದುವರಿಸಬೇಕೆಂದು ಹೇಳುತ್ತೇನೆ. ನೀವೀಗ ಗೊತ್ತುಮಾಡಿಕೊಂಡಿರುವಂತೆ 1962ನೇಯ ಇಸವಿಯ ಒಳಗೇ ಪೂರೈಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಂ. ಸಿ. ನರಸಿಂಹನ್.—ಇದನ್ನು ತೆಗೆದುಕೊಳ್ಳಕೂಡದೆಂದು ಯಾರಾದರೂ ಹೇಳಿದರೇ?

ಶ್ರೀ ಬಿ. ಚಾಮಯ್ಯ.—ಸದಸ್ಯರು ಮಾಡಿರುವ ಟೀಕೆಗಳು ನಿರಾಧಾರವಾದುವೆಂದು ಹೇಳಿದೆ ಅಷ್ಟೆ. ಕೆಲವು ಸದಸ್ಯರು ರೇಟು ಜಾಸ್ತಿ ಕೊಟ್ಟಿರುವ ವಿಷಯವನ್ನು ಪ್ರಸ್ತಾಪಿಸಿದರು. ರೇಟು ಕೊಟ್ಟಿರವುದು ಎಕ್ಸ್‌ಪರ್ಟ್ ಎಂಜಿಯರುಗಳು, ಚೀಫ್ ಎಂಜಿನಿಯರು ಇದ್ದ ಕಮಿಟಿಯವರ ತೀರ್ಮಾನದ ಪ್ರಕಾರ. ಅದಕ್ಕೆ ಮಂತ್ರಿಗಳೊಬ್ಬರೇ ಜವಾಬ್ದಾರರಲ್ಲ. ಕಮಿಟಿಯವರು ಯಾವ ತೀರ್ಮಾನ ಮಾಡಿದ್ದಾರೋ ಅದರಂತೆ ಕೊಟ್ಟಿದ್ದಾರೆ. ಆದ್ದರಿಂದ ನೀವು ಮಾಡಿರುವ ಆಕ್ಷೇಪಣೆ ಸರಿಯಿಲ್ಲವೆಂದು ನಾನು ಗಂಟಾಘೋಷವಾಗಿ ಹೇಳುತ್ತೇನೆ. ದೇಶದ ಪ್ರಗತಿಗೆ ಇಂದು ಮುಖ್ಯವಾಗಿ ಬೇಕಾದ್ದು ವಿದ್ಯುಚ್ಛಕ್ತಿ; ಏನೇ ಆದರೂ ಅದನ್ನು ನಿಲ್ಲಿಸಕೂಡದು ಎಂದು ಹೇಳುತ್ತೇನೆ.

ಇನ್ನೊಂದು ಆಕ್ಷೇಪಣೆ ಬಂದಿದೆ. ತಾವು ಇಂಟೆಗ್ರೇಟೆಡ್ ಜಿಲ್ಲೆಗಳ ಕಡೆಗೆ ಹೆಚ್ಚಿಗೆ ಗಮನಕೊಡುತ್ತಿದ್ದೀರಿ; ಎಲ್ಲಾ ಹಳೆಯ ಮೈಸೂರಿನವರಿಗೇ ಕೊಡುತ್ತಿಲ್ಲವೆಂದು ಹೇಳಿದರು. ಆ ನೀತಿ ನಮ್ಮಲ್ಲಿದ್ದರೆ ಖಂಡಿತ ಅದು ಬೇಡ. ಆ ಕಡೆಗೆ ಗಮನಕೊಡಬೇಡಿ ಎಂದು ನಾನು ಹೇಳುವುದಿಲ್ಲ. ಆದರೆ ನಿಮ್ಮ ಗಮನ ಇತ್ತ ಕಡೆಗೆ ಕೂಡ ಒಂದೇ ಸಮನಾಗಿರಲಿ ಎಂದು ಹೇಳಬಯಸುತ್ತೇನೆ: ಈ ಪ್ರದೇಶ ಸ್ವಲ್ಪ ಮುಂದು ವರಿದಿರಬಹುದು. ನಾವು ಮುಂದುವರಿದಿದ್ದ ಮಾತ್ರಕ್ಕೇ ನಮ್ಮ ನಡೆಯನ್ನು ಕುಂಠಿತಗೊಳಿಸಕೂಡದು ಎಂದು ಹೇಳುತ್ತೇನೆ.

ಇನ್ನು ಮೈನರ್ ಇರಿಗೇಷನ್ ವಿಷಯ: ತಾವೀಗ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಮಾಡುತ್ತಿದ್ದೀರಿ. ಸಂತೋಷ. ಆದರೆ ದೊಡ್ಡ ದೊಡ್ಡ ಪ್ರಾಜೆಕ್ಟುಗಳಿಂದ ನಿಮಗೆ ಲಾಭ ಬರಬೇಕಾದರೆ ವರ್ಷಾನುಗಟ್ಟಲೆ ಹಿಡಿಯುತ್ತದೆ. ಆದ್ದರಿಂದಲೇ ನೀವು ಮೈನರ್ ಇರಿಗೇಷನ್‌ಗಳ ಕಡೆಗೂ ಅಷ್ಟೇ ಗಮನಕೊಡುವುದು ಅವಶ್ಯಕವೆಂದು ಹೇಳುತ್ತಿದ್ದೇನೆ. ಇದಕ್ಕಾಗಿ ನೀವು ಇನ್ನೂ ಹೆಚ್ಚಿಗೆ ಹಣ ಒದಗಿಸಿಕೊಳ್ಳಬೇಕೆಂದು ಹೇಳುತ್ತೇನೆ; ನೀವು ಎಷ್ಟು ತುರ್ತಾಗಿ ಮೈನರ್ ವರ್ಕ್ಸ್‌ಗಳನ್ನು ಪೂರ್ತಿಮಾಡುತ್ತೀರೊ ಅಷ್ಟುಮಟ್ಟಿಗೆ ಹಳ್ಳಿಗಾಡಿನ ರೈತರಿಗೆ ಅನುಕೂಲ ಮಾಡಿದಂತಾಗುತ್ತದೆ. ನಾನು ಪಾಂಡವಪುರದಿಂದ ಬಂದವನಾಗಿದ್ದೇನೆ. ಅದು ಡ್ರೈ ಪ್ರದೇಶ, ಕುಡಿಯುವುದಕ್ಕೆ ಸಹ ನೀರು ಸಿಕ್ಕುವುದಿಲ್ಲ. ದನಕರುಗಳ ಕಷ್ಟ ಹೇಳತೀರದು. ಇಂಥ ಪ್ರದೇಶಗಳಿಗೆ ಅನುಕೂಲ ಮಾಡಿಕೊಡುವುದು ಸರ್ಕಾರದವರ ಕರ್ತವ್ಯ. ಮವಾಡದಳ್ಳಿ ಕೆರೆ ಎಂದು ಒಂದು ಕೆರೆ ನಮ್ಮಲ್ಲಿದೆ. ಲೋಕಪಾವನಿ ನದಿಯಿಂದ ನೀರು ತೆಗೆದು ಕೊಳ್ಳಬೇಕೆಂಬ ಯೋಜನೆಯನ್ನು ಮಾಡಬೇಕೆಂದು ಹೇಳಿ ಒಂಭತ್ತು ವರ್ಷವಾಯಿತು. ಒಂಭತ್ತು ವರ್ಷದಿಂದಲೂ ಕೆಲಸ ಮಾಡುತ್ತಲಿದ್ದೇವೆ.

(ಶ್ರೀ ಬಿ. ಚಾಮಯ್ಯ)

ಒಂಭತ್ತು ಲಕ್ಷರೂಪಾಯಿಗಳು ಆಗಲೇ ಖರ್ಚಾಗಿವೆ. ಆದರೂ ಜನರಿಗೆ ಯಾವ ಪ್ರಯೋಜನವೂ ಆಗಿಲ್ಲ, ಕೆಲಸ ತರದೂದಾಗಿ ನಡೆಯುತ್ತಿಲ್ಲ. ಇನ್ನೊಂದು ಉದಾಹರಣೆ ಹೇಳುತ್ತೇನೆ. ನಮ್ಮ ಕಡೆ ಎರಡು ಕೆರೆಗಳನ್ನು ರೆಸ್ಟೋರ್ ಮಾಡಬೇಕೆಂದು ಹೇಳಿ ಎಸ್ಟಿಮೇಟಾಗಿ ಐದು ವರ್ಷವಾದರೂ ಸ್ಯಾಂಕ್ಷನ್ ಆಗದೆ ಹಾಗೆಯೇ ಉಳಿದಿದೆ. ಈ ಎಸ್ಟಿಮೇಟುಗಳು ಮೇಲಕ್ಕೆ ಹೋಗುತ್ತವೆ, ಕೆಳಕ್ಕೆ ಬರುತ್ತವೆ. ಹೀಗಾಗಿ ಮೂರು ವರ್ಷ ಹಿಡಿಯುತ್ತದೆ. ಕೆರೆಗಳ ಹೆಸರು ಹೇಳುತ್ತೇನೆ : ಹೊನಗಾನಹಳ್ಳಿ, ಹೊಸಕೆರೆ, ಗೌಡಗೆರೆ ಹೊಸಕಟ್ಟೆ. ಇನ್‌ವೆಸ್ಟಿಗೇಷನ್ ಸರ್ಕಲ್‌ನವರು ನಮ್ಮ ಡಿಸ್ಟ್ರಿಕ್ಟಿನಲ್ಲಿ ಇದುವರೆಗೂ ಒಂದನ್ನು ಕೂಡ ಅಜಮಾಯಿಷಿಮಾಡಿ ಹೇಳಿಲ್ಲ. ನಿಮ್ಮ ಆಸಿಸ್ಟೆಂಟ್ ಎಂಜಿನಿಯರೂ ಮತ್ತು ಎಂಜಿನಿಯರೂ ಆ ಸ್ಥಳವನ್ನೆಲ್ಲಾ ಅಜಮಾಯಿಷಿಮಾಡಿದ್ದಾರೆ. ಲೋಕ ಪಾವನಿ ನದಿ ಗೋಳೇನಳ್ಳಿ ವ್ಯಾಲಿಯಲ್ಲಿ 600-700 ಎಕರೆಗಳಾಗುತ್ತವೆಂದು ಅವರು ಹೇಳಿದರು. ಅಷ್ಟಾದರೂ ಏನು ಮಾಡಲಿಲ್ಲ, ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಬೇಗನೆ ಈ ಕಾರ್ಯಕ್ಕೈಕೊಳ್ಳಬೇಕೆಂದು ನಾನು ಸೂಚನೆಮಾಡಬಯಸುತ್ತೇನೆ.

ಇನ್ನೊಂದು ವಿಷಯ, ನಮ್ಮ ಕಡೆ ಅನೇಕ ಜನ ರೈತರು ತಮ್ಮನ್ನೇ ಇದುರುನೋಡುತ್ತಿದ್ದಾರೆ. ಕೆ. ಆರ್. ಸಾಗರ್ ವಾಟರ್ ಸ್ಪ್ರೆಡ್‌ನಿಂದ ಜಮೀನು ಮುಳುಗಡೆಯಾದ ಜನ ಲಿಫ್ಟ್ ಇರಿಗೇಷನ್‌ಗೆ ಅವಕಾಶ ಕೊಡಬೇಕೆಂದು ಹೇಳಿ ಲಿಫ್ಟ್ ಇರೀಗೆಷನ್ ಸೊಸೈಟಿಗೆ ತಮ್ಮನ್ನು ಕರೆದುಕೊಂಡು ಹೋಗಿ ಅದರ ಪ್ರಾರಂಭೋತ್ಸವವನ್ನು ಕೂಡ ಮಾಡಿಸಿದರು. ಆ ಜನರು 30-40 ವರ್ಷಗಳಿಂದಲೂ ಜಮೀನು ಕಳೆದು ಕೊಂಡು ಆ ಪ್ರಾಂತಕ್ಕೆ ಬಂದು ಬಿಟ್ಟಿದ್ದಾರೆ. ಎಕರೆಗೆ 40-50 ರೂಪಾಯಿ ಬೀಳುತ್ತದೆಂದು ತಾವು ಹೇಳಿದಿರಿ. ಅದನ್ನೂ ಅವರು ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಎಷ್ಟೇ ಖರ್ಚು ಆದರೂ ಆ ಪ್ರಾಂತದ ಜನರಿಗೆ ಈ ಅನುಕೂಲವನ್ನು ಮಾಡಿಸಿಕೊಡಬೇಕೆಂಬು ನಾನು ಹೇಳುತ್ತೇನೆ.

†Sri M. C. NARASIMHAN.—On a point of order, Sir. I would invite your attention to pages 408 and 409 of the Budget Estimates for 1960-61. If you kindly refer to it, the estimate for 'Original Works – Major' is given there and it comes to about Rs. 40 lakhs, but on page 408 it is indicated as if there is no amount needed for major road works. But while giving details on page 409 it is indicated that they want some sum. This is a serious objection. Apart from that, in asterisk it is stated that the Chief Engineer is required to furnish details required to be given. We take objection that the Government cannot appropriate from the Budget for a matter for which they do not provide details. It is a fundamental thing. Here is a case where they do not wish to give any details. They say that they will furnish the details later. That is objection No. 1. The second objection is that on page 408 it is indicated that there is no money required for major roads. In view of these two objections we cannot discuss this demand at all. It is not merely a small sum but it is an extraordinary sum. So it is expected of Government to furnish all the details. There is no meaning in members coming and saying that this work is not included or that work is not included. For all that, the works about which the Hon'ble Member Sri Chamaiah has been speaking might be included. In these circumstances, the point is whether we can go ahead with this discussion and whether the Hon'ble Minister is prepared to furnish the details.

Mr. DEPUTY SPEAKER —It is only a clarification and not a point of order.

†Sri J.B. MALLARADHYA.—I would like the Hon'ble Member Sri Narasimhan to point out what is the budget principle which is offended against because I have also got a few more instances of the same category, Unless any particular principle of budgeting is offended against, I do not think there is any point of order. It is a fundamental issue which has been raised. The point is whether it is merely a matter of clarification or whether it is a point of order.

†Sri M.C. NARASIMHAN.—The point is very clear that it is an admitted principle that unless the House is given details of any item, it cannot pass it. For example, if the amount is for some other purpose for which there is no justification, the House might not pass it. After all it is possible the priority assigned to a particular work is not correct and that some other work should have been given priority and taken up. If the House is kept in dark about it and if large sums of money are spent on such works, it is just possible that the House might pass such demands but it is highly objectionable and wrong in principle. It is much less open to the Government to come forward and say that we may pass this demand subject to the Chief Engineer furnishing further details.

Mr. DEPUTY SPEAKER.—You can ascertain details from the Government.

†**Sri M.C. NARASIMHAN.**—I do not think there can be further details. After all, the approval of this House is sought on the basis that details are going to be given on some doom's day. As printed here, it is perfectly clear that what the Government wants to do is to get the approval of the House on the basis of some imaginary schemes to be submitted on some imaginary day. For all that, it might be submitted even by 1960-61.

Mr. DEPUTY SPEAKER.—I reserve my ruling on the point of order.

†**Sri H. M. CHANNABASAPPA.**—Sir, before the Speaker gives the ruling, I would like to say that there is absolutely no point of order. The Hon'ble Member can ask during the course of his speech why Government has not given these details and criticise the Government for not supplying them. There is no point of order because it is not going to offend the Rules of Procedure that are adopted in this House. He did not point out what particular rule has been offended. Secondly, the Hon'ble Member will please see that this amount is to be met out of the Sugarcane Cess Fund and these details will be worked out by the Chief Engineer.

†**ಶ್ರೀ ಬಿ. ಚಾಮಯ್ಯ.**—ಇತ್ತೀಚೆಗೆ ಸರ್ಕಾರದವರು ಟೂರಿಂಗ್ ಟೀಮೊಂದು ಒಂದು ಯೋಜನೆಮಾಡಿದ್ದಾರೆ ಈ ಟೀಮಿನವರು ಆ ಯಾಯಪ್ರಾಂತ್ಯಗಳಲ್ಲಿ ತಿರುಗಾಡಿ ಎಲ್ಲಿಗೆ ಏನೇನು ಕೆಲಸಗಳು ಆವಶ್ಯಕವಾಗಿ ಆಗಬೇಕೆಂಬುದನ್ನು ಅವರು ಸರ್ಕಾರಕ್ಕೆ ವರದಿ ಮಾಡುತ್ತಾರೆ. ಈರೀತಿ ಕೆಲಸ ಮಾಡುವಂಥ ಒಂದು ಟೀಮನ್ನೀಗ ಸರ್ಕಾರದವರು ಏರ್ಪಾಡುಮಾಡಿದ್ದಾರೆ. ಈ ಟೀಮಿನವರು ಸಧ್ಯದಲ್ಲೇ ಈ ತಿಂಗಳಲ್ಲೋ ಅಥವಾ ಮುಂದಿನ ತಿಂಗಳ ಆದಿಯಲ್ಲೋ ಅವರು ಒಂದು ವರದಿಯನ್ನು ಸರ್ಕಾರಕ್ಕೆ ಕಳುಹಿಸುವುದಲ್ಲಿದ್ದಾರೆಂದು ಊಹಿಸುತ್ತೇನೆ. ಅವರು ತಮ್ಮ ವರದಿಯಲ್ಲಿ ಶಿಫಾರ್ಸುಮಾಡುವ ಸ್ಕೂಲು, ಆಸ್ಪತ್ರೆ ರೋಡು ಇತ್ಯಾದಿ ಅನುಕೂಲಗಳನ್ನು ಆ ಯಾಯಪ್ರಾಂತ್ಯಕ್ಕೆ ಒದಗಿಸಲು ಸರ್ಕಾರದವರು ಕೂಡಲೆ ಕ್ರಮಕೈಗೊಳ್ಳುತ್ತಾರೆಂದು ನಂಬಿದ್ದೇನೆ. ಸರ್ಕಾರದವರೀಗೆ ಇಂಥ ಒಂದು ಟೀಮನ್ನು ಮಾಡಿರುವುದು ಬಹಳ ಒಳ್ಳೆಯ ಸಂತೋಷದ ವಿಚಾರವಾಗಿದೆ. ನಮ್ಮ ಪ್ರದೇಶದಲ್ಲಿ ರಸ್ತೆಗಳ ಸೌಕರ್ಯ ಏನೇನೂ ಸಾಲದು, ಆ ಪ್ರದೇಶಕ್ಕೆ ಹೆಚ್ಚಿನ ರಸ್ತೆ ಸೌಕರ್ಯ ಒದಗಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಪಾಂಡವಪುರ ಟೌನಿನಲ್ಲಿ ನೀರಿಗೆ ಬಹಳ ತೊಂದರೆ ಇದೆ. ಸರ್ಕಾರದವರು ಈ ನೀರಿನ ಕೊರತೆಯನ್ನು ತಪ್ಪಿಸಲು ಅಲ್ಲಿಗೆ ಹೆಚ್ಚಿನ ಗ್ರಾಂಟನ್ನು ಕೊಟ್ಟು ಆ ಟೌನಿಗೆ ನೀರಿನ ಸರಬರಾಯಿ ಆಗುವಂತೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿಯ ರಸ್ತೆಗಳು ಬಹಳ ಹೀನಸ್ಥಿತಿಯಲ್ಲಿವೆ. ಅನೇಕ ಹಳ್ಳಿಗಳಿಗೆ ರಸ್ತೆಗಳೇ ಇಲ್ಲ, ಮಂತ್ರಿಗಳೇನೋ ಯಾವ್ಯಾವ ರಸ್ತೆಗಳಾಗಬೇಕು ಅದಕ್ಕೆ ಒಂದು ಲಿಸ್ಟು ಕೊಡಿ ಎಂತ ಕೇಳಿದ್ದರು. ಕೊಟ್ಟಾಯಿತು, ಆ ವಿಚಾರದಲ್ಲಿ ಅವರು ಬೇಗ ಕಾರ್ಯಕ್ರಮ ಕೈಗೊಳ್ಳಬೇಕಾಗಿದೆ. ಆ ಪ್ರದೇಶದ ಜನರಿಗೆ ಸಂಚಾರ ಸೌಲಭ್ಯಗಳಿಲ್ಲದೆ ಬಹಳ ತೊಂದರೆ ಗೊಳಗಾಗಿದ್ದಾರೆ. ಶ್ರೀರಂಗಪಟ್ಟಣ ಮತ್ತು ಚೆನ್ನರಾಯಪಟ್ಟಣ-ರೋಡು ಮತ್ತು ಶ್ರೀರಂಗಪಟ್ಟಣ-ನಾಗಮಂಗಲ ರೋಡೂ ಬಹಳ ಕೆಟ್ಟುಹೋಗಿವೆ. ಈ ರಸ್ತೆಗಳಿಗೆ ತಾರ್ ಹಾಕಿಸಬೇಕೆಂದು ಕೇಳಿಕೊಳ್ಳುತೇನೆ. ಈ ರಸ್ತೆಗಳಲ್ಲಿ ಬಸ್ ಸಂಚಾರ ಬಹಳವಾಗಿದೆ. ಈ ರಸ್ತೆಗಳಿಗೆ ಸರ್ಕಾರದವರು ಹೆಚ್ಚಿನನಿಗಾ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ರೂರಲ್ ಕಮ್ಯೂನಿಕೇಷನ್ಸ್ ಮತ್ತು ಮೈನರ್ ಇರಿಗೇಷನ್ ಬಾಬುಗಳಿಗೆ ಹೆಚ್ಚು ಹೆಚ್ಚು ಹಣವನ್ನು ಖರ್ಚುಮಾಡಬೇಕು. ಇದನ್ನು ಜಾಗ್ರತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಪಬ್ಲಿಕ್ ವರ್ಕ್ಸ್ ಮಂತ್ರಿಗಳು ನಿಷ್ಪೃಹತೆಯಿಂದ ಕೆಲಸ ಮಾಡುತ್ತಾರೆಂಬ ವಿಷಯದಲ್ಲಿ ಎರಡು ಮಾತಿಲ್ಲ. ಒಂದು ವಿಷಯವನ್ನು ಮಾತ್ರ ಹೇಳಬೇಕಾಗಿದೆ. ಅದೇನೆಂದರೆ, ಸೀನಿಯರ್ ಅಧಿಕಾರಿಗಳಿರಬೇಕಾದ ಜಾಗದಲ್ಲಿ ಜೂನಿಯರ್ ಅಧಿಕಾರಿಗಳನ್ನು ಕೂಡಿಸುವುದು ಸರಿಯಲ್ಲ, ಹೀಗೆ ಮಾಡಬಾರದು. ಇದು ಆಗದೇಯಿರುವಹಾಗೆ ಈರೀತಿ ಕುಂದಕಬಾರದೇಯಿರುವ ಹಾಗೆ ನೋಡಿಕೊಳ್ಳಬೇಕು.

Sri H. M. CHANNABASAPPA.—So far as the Government is concerned, nothing has been done by the Government. If the Hon'ble Member were to give instances where any such a thing has taken place, the Government will be too pleased to examine it.

ಶ್ರೀ ಬಿ. ಚಾಮಯ್ಯ.—ನಮ್ಮ ದೇಶದಲ್ಲಿ ಚೀಫ್ ಇಂಜಿನಿಯರ್ (ಜನರಲ್) ಮೊದಲಿಸಿಂದಲೂ ಸೀನಿಯರ್ ಜಾಗದಲ್ಲಿರುವುದು ಸಂಪ್ರಾದಾಯವಾಗಿ ಬಂದಿದೆ. ಆದರೆ ಈ ದಿವಸ ಆ ಜಾಗದಲ್ಲಿ ಜೂನಿಯರ್ ಚೀಫ್ ಇಂಜಿನಿಯರ್ ಇದ್ದಾರೆ, ಈ ಕೊರತೆಯನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ, ಅಧಿಕಾರಿಗಳು ಏನಾದರೂ ತಪ್ಪಿಗಾಗಿ ಶಿಕ್ಷೆಗೆ ಗುರಿಯಾಗುವ ಸಂದರ್ಭದಲ್ಲಿ ಮೊದಲು ಅವರನ್ನು ಸಸ್ಪೆಂಷನ್ನಲ್ಲಿರಿಸುತ್ತಾರೆ. ಇಂಥಾ ಕೇಸುಗಳನ್ನು ಬೇಗ ತೀರ್ಮಾನಮಾಡಬೇಕು. ಹೀಗಾಗದೆ ವರ್ಷಗಟ್ಟಲೆ ಸಸ್ಪೆಂಷನ್ನಲ್ಲಿಟ್ಟಿದ್ದಾರೆ ಅವರ ಗತಿ ಏನಾಗಬೇಕು, ಅವರ ಸಂಸಾರದವರ ಗತಿ ಏನಾಗಬೇಕು ಎಂಬುದನ್ನು ಯೋಚನೆ ಮಾಡಬೇಕು. ಇಂಥ ಕೇಸುಗಳನ್ನು ಬೇಗ ಬೇಗ ತೀರ್ಮಾನ ಮಾಡಬೇಕೆಂದು ಹೇಳುತ್ತೇನೆ.

ಜಿಲ್ಲಾ ಹೆಡ್‌ಕ್ವಾರ್ಟರುಗಳನ್ನು ಸೇರಿಸುವ ರಸ್ತೆಗಳನ್ನು ಆಸ್‌ಫಾಲ್ಟ್ ಮಾಡಬೇಕು. ಇದರಿಂದ ದೇಶದಲ್ಲಿ ಜನರ ಆರೋಗ್ಯ ಚೆನ್ನಾಗಿರುತ್ತದೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಯಾವ ಯಾವ ರಸ್ತೆಗಳಾಗಬೇಕು, ಯಾವ ಮೈನರ್ ನೀರಾವರಿ ಕಾಮಗಾರಿಗಳಾಬೇಕು, ಯಾವ ಕಟ್ಟಡಗಳಾಗಬೇಕು

(ಶ್ರೀ ಬಿ. ಚಾಮಯ್ಯ)

ಎಂಬ ಬಗ್ಗೆ ಪಟ್ಟಿಯನ್ನಿಡಬೇಕು. ಪ್ರಜಾಪ್ರತಿನಿಧಿಗಳು ಮತ್ತು ಅಧಿಕಾರಿಗಳನ್ನು ಕೇಳಿ ಇಂಥ ಪಟ್ಟಿಯನ್ನು ಮಾಡಿಸಿದರೆ ಸರ್ಕಾರಕ್ಕೆ ಸರಿಯಾದ ಸ್ಥಿತಿ ಗೊತ್ತಾಗುತ್ತದೆ. ಏನು ಕೆಲಸಗಳಾಗಿವೆ, ಏನಾಗಿಲ್ಲವೆಂಬುದು ಗೊತ್ತಾಗುತ್ತದೆ. ಸರ್ಕಾರ ಕೊಡುವ ಗ್ರ್ಯಾಂಟ್ ಎಲ್ಲವೂ ಪೂರ್ತಿಯಾಗಿ ಖರ್ಚಾಗುವಂತೆ ಒತ್ತಾಯ ಮಾಡಬೇಕು, ಲ್ಯಾಪ್ಸ್ ಆಗಲು ಅವಕಾಶವಿರಬಾರದು. ಒಂದೊಂದು ಡಿವಿಜನ್‌ಗೂ ಎಷ್ಟೆಷ್ಟು ಹಣ ಕೊಡುತ್ತಾರೋ ಅಷ್ಟೂ ಖರ್ಚಾಗಬೇಕು. ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಗೊರೂರು ಯೋಜನೆಯನ್ನು ಮೂರನೆಯ ಯೋಜನೆಯಲ್ಲಿ ಸೇರಿಸಿದ್ದೇವೆಂದು ಹೇಳಿದ್ದಾರೆ. ಈ ಯೋಜನೆಯಿಂದ ನಮ್ಮ ಪಾಂಡವಪುರ ತಾಲ್ಲೂಕಿಗೂ ಅನುಕೂಲವಾಗುತ್ತದೆಯಾದುದರಿಂದ ಇದನ್ನು ತೀವ್ರವಾಗಿ ಮನಸ್ಸಿಗೆ ತೆಗೆದುಕೊಂಡು ಕಾರ್ಯಗತ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಗಣಿಗಳಿಗೆ ಸಂಬಧಪಟ್ಟ Orescarrying roads classify ಮಾಡಬೇಕು. ಈ ರಸ್ತೆಗಳು ಉತ್ತಮ ಸ್ಥಿತಿಯಲ್ಲಿರುವಂತೆ ಏರ್ಪಾಡು ಮಾಡಬೇಕು, ಇಷ್ಟು ಹೇಳಿ, ನನಗೆ ಮಾತನಾಡಲು ಇಷ್ಟು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರಿಗೆ ನನ್ನ ಕೃತಜ್ಞತೆಯನ್ನರ್ಪಿಸುತ್ತೇನೆ.

†ಶ್ರೀ ಎಸ್. ಸುಬ್ಬಯ್ಯನಾಯಕ್ (ಪುತ್ತೂರು).—ಸ್ವಾಮಿ ಸಭೆಯ ಮುಂದಿಟ್ಟಿರುವ 29, 50, 51, 41, 46, 47, 10, 43, 53, ಈ ಎಲ್ಲ ಬೇಡಿಕೆಗಳನ್ನೂ ನಾನು ಸಮರ್ಥಿಸುತ್ತೇನೆ, ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ.

Sri C. J. MUCKANNAPPA.—May we know till what time we are sitting to-day ?

Mr. DEPUTY SPEAKER.—Till 6 O'clock. Tomorrow the Minister will reply.

Sri J. B. MALLARADHYA.—Sir, every day we are getting into the time of another demand. We are not finishing the demands the same day. We have taken two days for the Civil Works. So, let the Hon'ble Minister reply today. If the Hon'ble Members are interested in having a discussion we can sit for longer time but not interfere with the time of the other demands. Yesterday the Agriculture Minister had to reply for two hours.

Sri B. D. JATTI.—If the House agrees to sit for longer time and if the Hon'ble Member closes his speech within ten more minutes, the Hon'ble Minister for Public Works will give his reply, today itself.

Sri B. L. NARAYANASWAMY.—I have a submission to make. At least henceforward care must be taken to see that members who have sent cut motions are given preference. Unfortunately members who have tabled cut motions are completely ignored and they are not given any chance to speak. It is really very bad and I appeal to the Chair to see some more care is taken in the matter.

5-30 P.M.

ಶ್ರೀ ಎಸ್. ಸುಬ್ಬಯ್ಯ ನಾಯಕ್ (ಪುತ್ತೂರು).—ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ನಮ್ಮ ಜಿಲ್ಲೆಯ ಹೆಚ್ಚಿನ ತಾಲ್ಲೂಕುಗಳು ಮಲೆನಾಡು ಪ್ರದೇಶಗಳಿಂದ ಕೂಡಿದ್ದಾಗಿವೆ. ಈ ದೆಸೆಯಿಂದಾಗಿ ನಮ್ಮ ಜಿಲ್ಲೆಯಲ್ಲಿ ವರ್ಷಕ್ಕೆ 120-180 ಅಂಗುಲಗಳಷ್ಟು ಮಳೆ ಬೀಳುತ್ತದೆ. ಆದ್ದರಿಂದ ಅಲ್ಲಿ ರಸ್ತೆ, ಸೇತುವೆ, ಕಲ್ವರ್ಟು ಮುಂತಾದುವುಗಳನ್ನು ಮಾಡುವುದರಲ್ಲಿ ಸ್ಪೆಷಲ್ ವಿಧಾನಗಳನ್ನು ಅನುಸರಿಸಿದ ಹೊರತು ಮಾಡಿದ ಕೆಲಸ ಏನೂ ಉಪಯೋಗಕ್ಕೆ ಬರುವುದಿಲ್ಲ. ಹೆಚ್ಚು ಮಳೆ ಬಿದ್ದಾಗ ನೀರು ಅಗಾಧವಾಗಿ ಹರಿದು ಕೊಚ್ಚಿ ಹೋಗುವ ಸಂದರ್ಭಗಳು ಹೆಚ್ಚು. ಅಂಥ ಪ್ರದೇಶಗಳಲ್ಲಿ ಬರೀ ಒಂದು ಕಾಸ್ವೇ ಮಾಡುವುದರಿಂದ ಏನೂ ಉಪಯೋಗವಾಗುವುದಿಲ್ಲ. 1957ನೆಯ ಇಸವಿಯಲ್ಲಿ ನಮ್ಮ ಜಿಲ್ಲೆಯ ಹೊಸಮಠ ಸೇತುವೆಯನ್ನು ಉದ್ಘಾಟನೆ ಮಾಡಿದರು; ಉದ್ಘಾಟನೆಯ ವೇಳೆ ಆರೇಳು ಅಡಿ ನೀರು ಕೆರೆಯ ನೀರು ಏರಿತ್ತು. ಇಂತಹ ಕಾಸ್‌ವೇಗಳಿಂದ ಪ್ರಯೋಜನವಿಲ್ಲ. ಹೀಗೆ ಪುತ್ತೂರು ಮುಂತಾದ ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುಗಳಲ್ಲಿ ಪಕ್ಕಾ ಸೇತುವೆಗಳನ್ನೇ ಮಾಡಬೇಕು. ನಿಮ್ಮ ಎಂಜಿನಿಯರುಗಳು ನಿರೀಕ್ಷಿಸುವುದಕ್ಕಿಂತಲ್ಲೂ ಹೆಚ್ಚು ನೆರೆ ಅಲ್ಲಿ ಬರುತ್ತದೆ. ಇಂಥ ವಿಷಯಗಳಲ್ಲಿ ಸ್ಥಳದ ಜನರ ಅಭಿಪ್ರಾಯವನ್ನೂ ತೆಗೆದುಕೊಳ್ಳುವುದು ಅವಶ್ಯಕವಾಗಿದೆ. ಈಗ ಸುಬ್ರಹ್ಮಣ್ಯದ ಹತ್ತಿರ ಸುಬ್ರಹ್ಮಣ್ಯ-ಸೂಳ್ಯದ ಮಧ್ಯೇ ಒಂದು ತಗ್ಗು ಸೇತುವೆ ಕಟ್ಟಬೇಕೆಂದು ಮಾಡಿದೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಸ್ವಲ್ಪ ಕಸ ಕಡ್ಡಿ ಬಂದರೂ ಅದು ಕಟ್ಟಿಕೊಂಡು ಮಾರ್ಗವೆಲ್ಲಾ ಕೆಟ್ಟುಹೋಗುತ್ತದೆ. ಎಷ್ಟೇ ರೂಪಾಯಿ ಖರ್ಚುಮಾಡಿದರೂ ಖಂಡಿತವಾಗಿ ತಗ್ಗು ಸೇತುವೆಯಲ್ಲಿ ಮಳೆಗಾಲದ ಹುಚ್ಚು ನೆರೆ ಬಂದೊಡನೆ ಅದು ಕೊಚ್ಚಿಕೊಂಡು ಹೋಗುವುದು ನಿಜ ಹಾಗಾಗುವುದರಿಂದ ಮಳೆಗಾಲದಲ್ಲಿ ವಾಹನಗಳ ಸಂಚಾರಕ್ಕೆ ಅಡಚಣೆ ತಪ್ಪಿದ್ದಲ್ಲ ತಾರೀಖು 8ನೇ ಮೇ 1959ರಲ್ಲಿ ಮಾನ್ಯ ಸಚಿವರು ಪುತ್ತೂರು ತಾಲ್ಲೂಕಿನಲ್ಲಿ 8-9 ಸೇತುವೆಗಳಿಗೆ ಅಸ್ತಿಭಾರ ಹಾಕಿದರು. ಇಷ್ಟು ದಿವಸಗಳಾದರೂ ಕೆಲಸ ಷುರುವಾಗಿಲ್ಲ. ಈ ಕೆಲಸವನ್ನು ತೀವ್ರವಾಗಿ ಪ್ರಾರಂಭಿಸಬೇಕೆಂದು ಹೇಳುತ್ತೇನೆ. ಅದೇ ರೀತಿ ಬೆಳ್ಳಾರೆಯ ಹತ್ತಿರ ಗೌರಿ ಹೊಳೆಗೆ ಒಂದು ಸೇತುವೆ ಮಾಡಬೇಕಾಗಿದೆ. ಈಗ ದರ್ಬೆ ಸುಬ್ರಹ್ಮಣ್ಯಕ್ಕೆ ಒಂದು ಸೇತುವೆಯಾಗುತ್ತಿದೆ. ಇವೆರಡು ಸೇತುವೆಗಳೂ ಆದರಲ್ಲಿ ಪುತ್ತೂರು ವರೆಗೂ ವಾಹನಗಳ ಸಂಚಾರಕ್ಕೆ ಅನುಕೂಲಮಾಡಿಕೊಟ್ಟಂತಾಗುತ್ತದೆ.

ಇನ್ನೊಂದು ವಿಷಯ. ನಮ್ಮ ಜಿಲ್ಲೆಯ ದಕ್ಷಿಣ ಭಾಗದ ಬಂಟವಾಳ, ಪುತ್ತೂರು, ಬೆಳ್ತಂಗಡಿ ಈ ತಾಲ್ಲೂಕು ಪ್ರದೇಶಗಳಿಗೆ ನೀರಾವರಿ ಅನುಕೂಲ ಕಲ್ಪಿಸುವುದರ ಕಡೆಗೆ ಇದುವರೆಗೆ ಏನೊಂದೂ ಪ್ರಯತ್ನ ನಡೆಸಿಲ್ಲವೆಂದು ವಿಷಾದದಿಂದ ಹೇಳುತ್ತೇನೆ. ವಿಟ್ಲದಿಂದ ಕೊಲ್ನಾಡು ಮಾರ್ಗವಾಗಿ ಉಳ್ಳಾಲಕ್ಕೆ

ಹೋಗುವ ಕಡೆ ಕೊಡರಗಾಯಿ, ಕಾಡುಮಠ ಮತ್ತು ಕಟ್ಟತ್ತಳ ಎಂಬ ಮೂರು ಭಾಗದಲ್ಲಿ ಸೇತುವೆ ಕಟ್ಟಬೇಕಾಗಿದೆ. ಮಳೆಗಾಲ ಬಂತೆಂದರೆ ಆ ಪ್ರದೇಶ ಅಂಡಮಾನ್ ದ್ವೀಪದಂತಾಗುತ್ತದೆ. ಇದನ್ನು ಈ ವರ್ಷದ ಬಡ್ಜೆಟ್ಟಿನಲ್ಲಿ ಸೇರಿಸಿಲ್ಲದಿದ್ದರೆ ಹೊಸ ಕೆಲಸವೆಂದಾದರೂ ಪರಿಗಣಿಸಿ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಸೂಳ್ಯ—ಆಲಟ್ಟೆ ಸೇತುವೆ. ಇದು ಬಹಳ ಪ್ರಾಮುಖ್ಯವಾದುದು. ಕೊಡಗು ಸೇಲ್ಕ್ ಭಾಗಗಳಿಗೆ ವಾಣಿಜ್ಯ ಸಂಪರ್ಕವನ್ನು ಕುದುರಿಸಿ, ತೆಂಗು, ಅಡಿಕೆ, ಮೆಣಸು ಮರದ ದಿಮ್ಮಿಗಳ ಸಾಗಾಣಿಕೆ ಇವುಗಳಿಗೆ ಬಹಳ ಅನುಕೂಲಪಡಿಸುವುದಾಗಿದೆ. ಇದನ್ನು ಮಾಡುವುದು ಅತ್ಯಾವಶ್ಯಕವೆಂದು ಹೇಳುತ್ತೇನೆ ಈ ಸಾರಿ ಕಮ್ಯೂನಿಕೇಷನ್ (2) ಬ್ರಿಡ್ಜಸ್ ಎಂಬ ಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಆರು ಲಕ್ಷದ 96ಸಾವಿರ ರೂಪಾಯಿಗಳನ್ನು ಮಿಸಲಾಗಿಟ್ಟಿದ್ದೀರಿ. ಈ ಹಣದಿಂದ ಈ ಸೂಳ್ಯ ಆಲಟ್ಟೆ ಸೇತುವೆ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಮಂಗಳೂರು ಮಡಕೇರಿ ರಸ್ತೆಯಲ್ಲಿ ಬಿ.ಸಿ. ರೋಡ್ ವರೆಗೂ ಮಾರ್ಗವನ್ನು ಎತ್ತರಿಸಬೇಕೆಂದು ಮೂರು ಲಕ್ಷ 20ಸಾವಿರ ರೂಪಾಯಿಗಳನ್ನು 1957ರಲ್ಲಿ ಒದಗಿಸಿದರು. ಇನ್ನೂ ಈ ಕೆಲಸ ಮುಗಿದಿಲ್ಲ. ಬಹಳ ನಿಧಾನವಾಗಿ ಕೆಲಸ ನಡೆಯುತ್ತಿದೆ. ಕಳೆದ ವರ್ಷ ನೆರೆನೀರಿನಿಂದಾಗಿ ಈ ರಸ್ತೆಯಲ್ಲಿ ಒಂದು ವಾರದವರೆಗೆ ವಾಹನಗಳೆಲ್ಲಾ ನಿಂತುಹೋಗಿದ್ದುವು. ಆದ್ದರಿಂದ ಈ ರಸ್ತೆಯನ್ನು ನಿಧಾನ ಮಾಡದೆ ಬೇಗ ಕೈಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನು ನಮ್ಮ ಜಿಲ್ಲೆಯ ನೀರಾವರಿ ಏರ್ಪಾಡಿನ ವಿಷಯ. ನಮ್ಮ ಜಿಲ್ಲೆಯಲ್ಲಿ ನೀರಾವರಿ ಅನುಕೂಲಕ್ಕಾಗಿ ಮಾಡಲಿಕ್ಕಾಗುವುದು ಒಂದೇ. ಅದು ಲಿಫ್ಟ್ ಇರಿಗೇಷನ್ ಏರ್ಪಾಡು. ಅಲ್ಲಿ ದೊಡ್ಡ ನೀರಾವರಿ ಯೋಜನೆಗಳು ಫಲಕಾರಿಯಾಗುವುದಿಲ್ಲ. ಆದ್ದರಿಂದ ಸಣ್ಣ ಯೋಜನೆಗಳನ್ನೇ ಇಲ್ಲಿ ಕೈಕೊಳ್ಳಬೇಕು. ಇದನ್ನು ಕೇಳಿದರೆ ಮಾನ್ಯ ಸದಸ್ಯರು ಆಶ್ಚರ್ಯಗೊಳ್ಳಬಹುದು. ಏಕೆಂದರೆ ಅಲ್ಲಿ 180 ಇಂಚು ಮಳೆ ಬೀಳುತ್ತದೆಂದು ನಾನೇ ಹೇಳಿದೆ. ಅಷ್ಟು ಬಿದ್ದರೂ ಇದು ನಿಜ. ಜನವರಿಯಿಂದ ಜೂನ್ ತಿಂಗಳವರೆಗೆ ಅಲ್ಲಿನ ಕೆರೆಗಳೆಲ್ಲಾ ಬತ್ತಿಹೋಗಿರುತ್ತವೆ. ಆದುದರಿಂದ ಹೊಳೆಗಳಿಗೆ ಅಣೆಕಟ್ಟ ಕಟ್ಟಿದರೂ ಪ್ರಯೋಜನವಾಗುವುದಿಲ್ಲ. ಈ ಕಾರಣ ಲಿಫ್ಟ್ ಇರಿಗೇಷನ್ನಿಗೆ ಅಲ್ಲಿ ಹೆಚ್ಚು ಪ್ರಾಮುಖ್ಯತೆ ಕೊಡಬೇಕು. ಇದನ್ನು ತೀವ್ರವಾಗಿ ಮಾಡಬೇಕೆಂದು ನಾನು ಹೇಳುತ್ತೇನೆ.

ಆಮೇಲೆ ಪಂಪುಗಳ ವಿಷಯ. ಇದು ಅತ್ಯಾವಶ್ಯಕವೆಂದು ಹೇಳಬೇಕಾಗಿದೆ. ಮಾನ್ಯ ಸಚಿವರು ಸೂಳ್ಯ ಕ್ಷೇತ್ರಕ್ಕೆ ಬಂದಾಗ 1000 ಹೆಚ್. ಪಿ.ಗಿಂತ ಹೆಚ್ಚಿಗೆ ಪಡೆಯುತ್ತೇವೆಂದು ಭರವಸೆಕೊಟ್ಟು ಜನರು ಡಿಪಾಜಿಟ್ ಕೊಡಮಾಡಿದ್ದಾರೆ. ಈ ಕೆಲಸಕ್ಕಾಗಿ ಐದು ಲಕ್ಷರೂಪಾಯಿ ಯಾಗುತ್ತದೆಂದು ಎಸ್ಟಿಮೇಟು ಮಾಡಿದ್ದಾರೆಂದು ತಿಳಿದುಬಂದಿದೆ. ಇದನ್ನು ಕೂಡಲೆ ಕಾರ್ಯಗತಮಾಡುವುದಕ್ಕೆ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ. ವಿದ್ಯುಚ್ಛಕ್ತಿ ಸಹಾಯ ಕೊಟ್ಟು ಲಿಫ್ಟ್ ಇರಿಗೇಷನ್ ಏರ್ಪಾಡು ಮಾಡಿದಲ್ಲಿ ನಮ್ಮ ಕಡೆ ವರ್ಷಕ್ಕೆ ಬತ್ತದ ಎರಡು ಬೆಳೆಯಲ್ಲ ಮೂರು ಬೆಳೆ ಕೂಡ ಮಾಡಬಹುದೆಂದು ನಾನು ಹೇಳುತ್ತೇನೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇಂದು ಯಾವ ಭಾಗದಲ್ಲಿ ನೋಡಿದರೂ ಒಂದು ಕೈಗಾರಿಕೆಯೂ ಕಂಡುಬರುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಅಲ್ಲಿ ವಿದ್ಯುಚ್ಛಕ್ತಿ ಇಲ್ಲದಿರುವುದು. ವಿದ್ಯುಚ್ಛಕ್ತಿ ಬಂದುದಾದರೆ ಬೆತ್ತದ ಕೈಗಾರಿಕೆಗಳು ಕಾಗದದ ಕೈಗಾರಿಕೆಗಳು ಇವೆಲ್ಲವನ್ನೂ ಅಭಿವೃದ್ಧಿ ಪಡಿಸಬಹುದು. ಅಲ್ಲಿ ಸಣ್ಣ ಸಣ್ಣ ಜಲಪಾತಗಳಿಂದ ವಿದ್ಯುದ್ಯೋಜನೆಗಳನ್ನು ಕೈಕೊಳ್ಳುವುದಕ್ಕೆ ಕೂಡ ಅವಕಾಶವಿದೆ. ತಾವು ಮನಸ್ಸು ಮಾಡಿದರೆ ಉತ್ತಮ ಅಭಿವೃದ್ಧಿಯ ಕೆಲಸವನ್ನು ಕೈಕೊಳ್ಳಬಹುದು. ಇದುವರೆಗೆ ಒಂದೆರಡು ಮಾತ್ರ ತಾವು ಕೈಕೊಂಡಿದ್ದೀರಿ. ಸಂಪಾಜೆಘಾಟಿ, ಗಗನ ಚುಕ್ಕಿ, ಗಗನಮಕ್ಕಿ, ಮುಂತಾಗಿ ಅನೇಕ ಜಲಪಾತಗಳನ್ನು ನೀವು ರೂಢಿಸಬಹುದಾಗಿದೆಯೆಂದು ನಾನು ಹೇಳಬಯಸುತ್ತೇನೆ.

ಈ ಜಲಪಾತಗಳಿಂದ ವಿದ್ಯುಚ್ಛಕ್ತಿಯನ್ನು ಪಡೆಯಲಿಕ್ಕೆ ಅನುಕೂಲ ಮಾಡಿಕೊಡಬೇಕು. ಸ್ವಿಟ್ಜರ್ಲೆಂಡಿನಲ್ಲಿ ಇದಕ್ಕಿಂತಲೂ ಸಣ್ಣ ಜಲಪಾತಗಳಿಂದ ವಿದ್ಯುತ್ತನ್ನು ಒದಗಿಸಿಕೊಡುತ್ತಾರೆ ಎಂದು ನಾನು ಕೇಳಿದ್ದೇನೆ. ಆ ಲೆಕ್ಕದಲ್ಲಿ ಇಲ್ಲಿ ಈ ಒಂದು ಕಾರ್ಯವನ್ನು ಕೈಕೊಳ್ಳಲಿಕ್ಕೆ ಕೂಡಲೇ ಹೆಚ್ಚುಗಮನ ಕೊಡಬೇಕೆಂದು ಹೇಳುತ್ತೇನೆ.

[MR. SPEAKER in the Chair]

ಈಗ ಗಂಗೊಳ್ಳಿ ಮತ್ತು ನೇತ್ರಾವತಿ ನದಿಗೆ ಎರಡು ದೊಡ್ಡ ಸೇತುವೆಗಳು ಕೇಂದ್ರ ಸರ್ಕಾರದಿಂದ 1956ಕ್ಕೆ ಮೊದಲೇ ಮಂಜೂರಾಗಿದ್ದರೂ ಕೂಡ ಅವುಗಳ ಕೆಲಸವನ್ನು ನಮ್ಮ ರಾಜ್ಯ ಸರ್ಕಾರದವರು ಇನ್ನೂ ನೆರವೇರಿಸಲಿಲ್ಲ. ಇದು ಮಂದಗತಿಯಿಂದ ಸಾಗುತ್ತಾಯಿರುವುದರಿಂದ ನಮಗೆ ಕೇಂದ್ರದಿಂದ ಬರತಕ್ಕ ಸಹಾಯ ನಿಂತುಹೋಗಬಹುದು. ಅದರಿಂದ ಈ ಕೆಲಸವನ್ನು ಬಹಳ ಶೀಘ್ರವಾಗಿ ಮಾಡಬೇಕಾಗಿ ಬರಬಹುದು. ಕಾರಣ ದಿನವಹಿ ಕೂಲಿ ಹೆಚ್ಚಾಗುತ್ತಾ ಇದೆ. ಸಾರಿಗೆ ಸಾಮಗ್ರಿಗಳನ್ನು ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಆದುದರಿಂದ ಅದನ್ನು ತೀವ್ರಗತಿಯಿಂದ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಟ್ಟಡಗಳ ವಿಚಾರ ಹೇಳಲಿಕ್ಕೆ ಬಯಸುತ್ತೇನೆ. ನಮ್ಮಲ್ಲಿ ಸರ್ಕಾರಿ ಕಟ್ಟಡ ಕಟ್ಟುವಂಥ ಕ್ರಮ ಕಡಿಮೆ ಇದೆ. ಪುತ್ತೂರು ತಾಲ್ಲೂಕು ಆಫೀಸು ಬಹಳ ಹಳೆಯ ಕಟ್ಟಡ. ಅಲ್ಲಿಗೆ ವಿದ್ಯುಚ್ಛಕ್ತಿಯನ್ನು ಇನ್ನೂ ಒದಗಿಸದೇ ಇರುವುದರಿಂದ ಹಳೇ ಕ್ರಮದಲ್ಲೇ ಗಾಳಿ ಪಂಕ ಎಳೆಯುತ್ತಾ ಇದ್ದಾರೆ. ಈಗಿನ ಕಾಲಕ್ಕೆ ಒಬ್ಬ ನೌಕರನಿಂದ ಗಾಳಿ ಪಂಕ ಎಳೆಯಿಸುವುದು ಸರಿಯಲ್ಲ ಎಂದು ಹೇಳುತ್ತೇನೆ. ಅಲ್ಲಿ fan ಇಲ್ಲದೇ ನಿಜವಾಗಿಯೂ ಕೆಲಸ ಮಾಡಲಿಕ್ಕೆ ಸಾಧ್ಯವೇ ಇಲ್ಲ. ತಡೆಯಲಾರದ ಶೆಕೆ. ಹೊರಗಿದ್ದರೆ ಶೆಕೆ. ಒಳಗಿದ್ದರೆ ದಾಹ ಇದರಿಂದ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ. ಆದಕಾರಣ ಆ ಕಟ್ಟಡ ಪುನರ್ರಚನೆ ಮಾಡಬೇಕೆಂದು ಹೇಳುತ್ತೇನೆ. ಪುತ್ತೂರು ತಾಲ್ಲೂಕು ಹೆಡ್‌ಕ್ವಾರ್ಟರ್ ಆಸ್ಪತ್ರೆಗೆ ನರ್ಸಸ್ ಕ್ವಾರ್ಟರ್ಸ್ ಕಟ್ಟಲಿಕ್ಕೆ ಈ ಬಡ್ಜೆಟ್‌ನಲ್ಲಿ ಹಣ ಒದಗಿಸಲಾಗಿದೆ–ಬಹಳ ಸಂತೋಷ. ಆದರೆ ಈಗಿರತಕ್ಕ ಆಸ್ಪತ್ರೆಯ ಕಟ್ಟಡದಲ್ಲಿ ಸ್ಥಳದ ಅವಕಾಶ ಏನೇನೂ ಇಲ್ಲ. ಅದಕ್ಕೆ ಆ ಕಟ್ಟಡದ ಬಡಾವಣೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ವಿದ್ಯಾಭ್ಯಾಸದ ಸಲುವಾಗಿ ಕಟ್ಟಡ ಕಟ್ಟುವಂಥ ಕ್ರಮವೇ ಬಹಳ ಕಡಿಮೆ. ಎಲಿಮೆಂಟರಿ ವಿದ್ಯಾಭ್ಯಾಸಕ್ಕೆ ಕಟ್ಟಡ ಒದಗಿಸಿಲ್ಲ. ಅದಕ್ಕೆ ಒದಗಿಸಿ ಎಂದು ಹೇಳುವುದಿಲ್ಲ. ನನ್ನ ಒಂದು ಹೊಸ ಸೂಚನೆ ಏನೆಂದರೆ ಮಲೆನಾಡಿನಲ್ಲಿ ಬಹಳ ಹಿಂದುಳಿದ ಜನರು ಇದ್ದಾರೆ. ಅವರು ಶಾಲೆ ಬೇಕೇಎಂದರೆ ಬೇಡ ಎನ್ನುವ

(ಶ್ರೀ ಎಸ್. ಸುಬ್ಬಯ್ಯನಾಯಕ್)

ಸ್ಥಿತಿಯಲ್ಲಿದ್ದಾರೆ. ಅಂಥಾದ್ದರಲ್ಲಿ ಶೇಕಡ 5 ಅಂಶವಾದರೂ ಕಟ್ಟಡವನ್ನು ಸರಕಾರವೇ ಪೂರ್ತಿಯಾಗಿ ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ. ಮತ್ತು ಕೇವಲ ಮಲೆನಾಡು ಪ್ರದೇಶದಲ್ಲಿ ಮುಖ್ಯ ಉಪಾಧ್ಯಾಯರು ಮತ್ತು ಲೇಡಿ ಟೀಚರ್ಸ್‌ಗೆ ಕ್ವಾರ್ಟರ್ಸ್ ಕಟ್ಟಿಸಬೇಕೆಂದು ಹೇಳುತ್ತಾ ಇದ್ದೇನೆ. ಬೆಳ್ಳಾರ ಪೋಲೀಸ್ ಸ್ಟೇಷನನ್ನು ಇತ್ತೀಚೆಗೆ ತೆರೆಯಲಾಗಿದೆ. ಅದು ಹೈಸ್ಕೂಲಿನ ಹತ್ತಿರ ಇರುವ ಕಾರಣ ಅದಕ್ಕೆ ಬೇರೆ ಒಂದು ಪೋಲೀಸ್ ಸ್ಟೇಷನ್ ಕಟ್ಟಡ ಮತ್ತು ಪೋಲೀಸ್ ಹೆಡ್ ಕಾನ್‌ಸ್ಟೇಬಲ್ಸ್ ಕ್ವಾರ್ಟರ್ಸ್ ಕಟ್ಟಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕೆಲವೊಂದು ಸೂಚನೆಗಳಿಗೆ ತಾವು ಹೆಚ್ಚಿನ ಆದ್ಯತೆ ಕೊಟ್ಟು ನೆರವೇರಿಸಬೇಕೆಂದು ಹೇಳಿ, ಕೇವಲ ಪ್ರತಿಯೊಂದಕ್ಕೆ ದಕ್ಷಿಣ ಕನ್ನಡ ಜಿಲ್ಲೆಗೆ ತುಂಬಾ ಕೆಲಸ ಕಾರ್ಯಗಳನ್ನೂ ಪಿ. ಡಬ್ಲ್ಯು. ಡಿ. ಯಿಂದ ಒದಗಿಸಲಾಗಿದೆ ಎಂದು ಹೇಳಿ, ಅವನ್ನು ಕಾರ್ಯಗತಮಾಡದಿದ್ದರೆ ನಮಗೆ ಪ್ರಯೋಜನವಾಗುವುದಿಲ್ಲ. ಅವನ್ನು ತೀವ್ರಗತಿಯಿಂದ ಸಾಗಿಸಲಿಕ್ಕೆ ಮಾನ್ಯ ಸಚಿವರು ಹೆಚ್ಚು ನಿಗಾ ಕೊಡಬೇಕೆಂದು ಹೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸುತ್ತೇನೆ.

†ಶ್ರೀ ಕೆ. ಎ. ಪಾಟೀಲ್ (ತಾಳೀಕೋಟೆ).—ಮಾನ್ಯ ಅಧ್ಯಕ್ಷರೇ, ಈದಿವಸ ಪಿ. ಡಬ್ಲ್ಯು. ಡಿ. ಡಿಮ್ಯಾಂಡಿನ ಮೇಲೆ ಹೆಚ್ಚಿನ ಹಣ ಖರ್ಚು ಮಾಡುತ್ತಾ ಇದ್ದೇವೆ. ಪಿ. ಡಬ್ಲ್ಯು. ಡಿ. ನಲ್ಲಿ ಸಾಧಾರಣವಾಗಿ ರಸ್ತೆ, ಕುಡಿಯುವ ನೀರು ಮತ್ತು ಇರಿಗೇಷನ್, ವಿದ್ಯುಚ್ಛಕ್ತಿ ಈ ಯೋಜನೆಗಳೆಲ್ಲವೂ ಬರುತ್ತವೆ. ಸಾಧಾರಣವಾಗಿ ನಮ್ಮಲ್ಲಿ ಮೊದಲಿನಿಂದಲೂ ಹೇಳಿಕೊಳ್ಳುತ್ತಾ ಇದ್ದೇವೆ, ರಸ್ತೆಗಳಿಲ್ಲ, ಮತ್ತು ಇರಿಗೇಷನ್ ಕಡೆಗೆ ಹೆಚ್ಚು ಲಕ್ಷ್ಯಕೊಟ್ಟಿಲ್ಲ ಎಂದು. ಮೊನ್ನೆ ಮೊನ್ನೆ ಪಿ. ಡಬ್ಲ್ಯು. ಡಿ. ಮಂತ್ರಿಗಳು ನಮ್ಮ ಕಡೆ, ಧಾರವಾಡ, ಬಿಜಾಪುರ, ಬೆಳಗಾಂ, ಬಿದರೆ ಜಿಲ್ಲೆಗಳಲ್ಲಿ 20 ಸೇತುವೆಗಳ ಕೆಲಸವನ್ನು ಕೈಕೊಂಡಿದ್ದಾರೆ. ಅದಕ್ಕೆ ಹಳೇ ಮೈಸೂರಿನ ಮಿತ್ರರಾದ ಚಾಮಯ್ಯನವರು ಮತ್ತು ಮುಕ್ಕಣ್ಣಪ್ಪನವರು ಬರೀ ಬೊಂಬಾಯ್ ಕರ್ನಾಟಕಕ್ಕೆ ಅಷ್ಟೇ ಮಂತ್ರಿಗಳು ಲಕ್ಷ್ಯಕೊಡುತ್ತಿದ್ದೀರಿ ಎಂದು ಮೇಲಿಂದಮೇಲೆ ಅಲಿಗೇಷನ್ ಮಾಡುತ್ತಾ ಇದ್ದಾರೆ. ಇವತ್ತಿನದಿವಸ ಹಳೇ ಮೈಸೂರು-ಹೊಸ ಮೈಸೂರು ಎಂಬ ಭಾವನೆ ಬರಬಾರದು. ಪಾಂಡವಪುರಕ್ಕೆ ಆಗಲೀ ಗುಬ್ಬಿಗೆ ಆಗಲೀ ಒಂದು ಸೇತುವೆ ಕಟ್ಟಿದರೆ ಇತ್ತಕಡೆ ಏಕೆಮಾಡುತ್ತಿದ್ದೀರಿ ಎಂದು ನಾವೂ ಕೂಡ ಆಕ್ಷೇಪಮಾಡುವುದು ಸರಿಯಲ್ಲ. ಮಾನ್ಯ ಸದಸ್ಯರು ಯಾವಾಗಲೂ ಸಹೃದಯ ಮನೋವೃತ್ತಿಯಿಂದ ಇರಬೇಕು. ಗುಬ್ಬಿ ಕಾನ್‌ಸ್ಟಿಟ್ಯುಯನ್ಸಿ ಅಭಿವೃದ್ಧಿಯಾದರೆ ನಮ್ಮ ದೇಶದ ಅಭಿವೃದ್ಧಿಯಾದಂತೆಯೇ ಎಂದು ನಾವು ಭಾವಿಸಬೇಕು. ಬೊಂಬಾಯ್ ಕರ್ನಾಟಕದವರಾದ ಚೀಫ್ ಮಿನಿಸ್ಟರು ಅವರಾದರೂ ಏನು ಹೇಳುತ್ತಾರೆ? 1959ರಲ್ಲಿ ನಮ್ಮಲ್ಲಿ ಬರಗಾಲ ಇತ್ತು, ಮೇಲಿಂದ ಮೇಲೆ ಕಾಂಗಾರಿಗಳನ್ನು ಕೈಕೊಳ್ಳಬೇಕೆಂದು ಹೇಳಿದ್ದಕ್ಕೆ ಬಡ್ಜೆಟ್‌ನಲ್ಲಿ ಇದನ್ನೆಲ್ಲಾ ಸೇರಿಸಿಲ್ಲ, ಸೇರಿಸಿದ್ದರೆ ಮಾಡಬಹುದಾಗಿತ್ತು ಎಂದು ಅವರು ಹೇಳಿದರು. ಬಡ್ಜೆಟ್‌ನಲ್ಲಿ ಇದೆಯೋ ಇಲ್ಲವೋ ಎಂಬುದನ್ನು ನೋಡಿಕೊಂಡು ಬರಗಾಲ ಬರುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಜಿಲ್ಲೆಯಲ್ಲಿ ಲಕ್ಷಗಟ್ಟಲೆ ಹಣ ಖರ್ಚುಮಾಡಿದ್ದೇವೆ.

ಶ್ರೀ ಕೆ. ಎ. ಪಾಟೀಲ್. ಎಷ್ಟೋ ಭಾಗಗಳಲ್ಲಿ ಕುಡಿಯುವ ನೀರಿನ ಬಾವಿಗಳು ಇಲ್ಲ. ಬಾವಿ ಇರುವ ಕಡೆ ಉಪ್ಪುನೀರು ಇದೆ. ಕೆಲವು ಕೆರೆಗಳಲ್ಲಿ 15-20 ವರ್ಷದಿಂದ ಹೂಳು ತುಂಬಿಹೋಗಿದೆ. ಅದನ್ನು ತೆಗೆದಿಲ್ಲ. ನಾವು ಇಲ್ಲಿ ಪ್ರಶ್ನೆಹಾಕಿ ಕೇಳಿದರೆ ಹೂಳು ತೆಗೆಯಲು 20 ಸಾವಿರ ರೂಪಾಯಿ ಖರ್ಚು ಬರುತ್ತದೆ ಎಂದು ಹೇಳುತ್ತೀರಿ. ಹೀಗಿರುವಾಗ ತಾವು ಅಲ್ಲಿಗೆ ಸ್ವಲ್ಪ ಲಕ್ಷ್ಯಕೊಟ್ಟಮಾತ್ರಕ್ಕೆ ಬಾಕಿ ಪ್ರದೇಶಗಳನ್ನು ನಿರ್ಲಕ್ಷ್ಯಮಾಡಿದಹಾಗೇನೂ ಆಗಲಿಲ್ಲ. ಪಾಂಡವಪುರ ಅಭಿವೃದ್ಧಿ ಆದರೂ ಅಷ್ಟೇ, ಗುಬ್ಬಿ ಅಭಿವೃದ್ಧಿ ಆದರೂ ಅಷ್ಟೇ ಇಡೀ ಕರ್ನಾಟಕ ಮುಂದೆ ಬಂದಹಾಗಾಗುತ್ತದೆಯೇ ಹೊರತು ಮತ್ತೆ ಬೇರೆಅಲ್ಲ. ಆದ್ದರಿಂದ ಇಡೀ ದೇಶದಲ್ಲಿ ಎಲ್ಲಿ ಅವಶ್ಯಕತೆಇದೆ ಅಲ್ಲಿ ಕೆಲಸ ಕಾರ್ಯಗಳನ್ನು ಕೈಕೊಂಡು ಅಭಿವೃದ್ಧಿಪಡಿಸಬೇಕಾದ್ದು ಸರ್ಕಾರದವರ ಕರ್ತವ್ಯವಾಗಿದೆ. ನಾವು ಹೊರಗಿನ ಪ್ರದೇಶದವರು ಕರ್ನಾಟಕಕ್ಕೆ ಏಕೆ ಬಂದೆವು ಎಂದರೆ ಬೊಂಬಾಯ್ ಸರ್ಕಾರದಲ್ಲಿದ್ದಾಗ ನಮ್ಮ ಭಾಗದಲ್ಲಿ ಯಾವುದೇ ನೀರಾವರಿ ಯೋಜನೆ ಆಗಲೀ ರಸ್ತೆ ಸೌಕರ್ಯ ಆಗಲೀ ಮಾಡದೇ ಇದ್ದುದರ ಸಲುವಾಗಿ. ಅಂಥಾದ್ದರಲ್ಲಿ ಇವತ್ತು ಅಲ್ಲಿ 20 ಸೇತುವೆಗಳನ್ನು ಕಟ್ಟುವುದರಿಂದ 2 ಕೋಟಿ ರೂಪಾಯಿ ಖರ್ಚಾಗಬಹುದು. ಭದ್ರಾ ಆಗಲಿ, ಶರಾವತಿ ಆಗಲೀ ಕೋಟ್ಯಾಂತರ ರೂಪಾಯಿ ಖರ್ಚಾಗಿ ಅದರಿಂದ ವಿದ್ಯುಚ್ಛಕ್ತಿ ಉತ್ಪನ್ನವಾಗುವುದಾದರೆ ಅದು ಆ ಪ್ರದೇಶದಲ್ಲೇ ಉಪಯೋಗವಾಗಬೇಕು. ಬೇರೆ ಕಡೆಗೆ ಆಗಬಾರದು ಎಂಬ ಭಾವನೆಯನ್ನು ಖಂಡಿತವಾಗಿಯೂ ಮಾಡಬಾರದು.

ನಮ್ಮಲ್ಲಿ ನಾಲ್ಕೈದು ಜಿಲ್ಲೆಗಳು ಹಿಂದುಳಿದಿವೆ. ಅಲ್ಲಿ ಸರ್ವೆ ಮಾಡಬೇಕು. ಬಿಜಾಪುರ, ಧಾರವಾಡ ಮುಂತಾದ ಹಿಂದುಳಿದಿರುವ ಜಿಲ್ಲೆಗಳಲ್ಲಿ ಸರ್ವೆ ಮಾಡಿ ಅಭಿವೃದ್ಧಿಯಾಗಿಲ್ಲದಿರುವಕಡೆ ರಸ್ತೆ, ಸೇತುವೆ ವಗೈರೆ ಆಗಬೇಕಾಗಿರುವುದನ್ನು ಮಾಡಿಕೊಡಬೇಕು. ಮುಂಬಯಿ ಕರ್ಣಾಟಕ, ಹಳೇ ಮೈಸೂರು ಎಂದು ಭೇದಭಾವನೆಯಿಲ್ಲದೆ ಹಿಂದುಳಿದಿರುವ ಭಾಗ ಯಾವುದೆಂದು ನೋಡಿ ಅಲ್ಲಿ ಅಗತ್ಯವಾದ ಕೆಲಸ ಕಾರ್ಯ ಕೈಕೊಳ್ಳಬೇಕು.

ನಮ್ಮ ತಾಲ್ಲೂಕಿನಲ್ಲಿ ಎರೆ ಜಮೀನು, ಬ್ಲ್ಯಾಕ್ ಸಾಯಿಲ್ ಇದೆ. ನೀರಿನ ಸೌಕರ್ಯ ಸಾಲದು. ಅದಕ್ಕೆ ಗಮನಕೊಡಬೇಕು. ಬರಗಾಲ ಕಾಮಗಾರಿಯಲ್ಲಿ ಮಾಡಿದ ರಸ್ತೆಗಳು ಈಗ ಉಪಯೋಗವಿಲ್ಲದಂತಾಗಿವೆ. ಅವುಗಳನ್ನು ಸರಿಯಾದ ಸ್ಥಿತಿಗೆ ತಂದು ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರೆ ಒಳ್ಳೆಯದು. ಈ ಕೆಲಸ ತುರುತಾಗಿ ಆಗಬೇಕು. ಮುಖ್ಯವಾಗಿ ಸೇತುವೆಗಳು, ಕಾಸ್‌ವೇಗಳು ಆಗಬೇಕು. ಡೋಣಿ ನದಿ ಇರುವಕಡೆ ಮಳೆಗಾಲದಲ್ಲಿ ಒಂದು ದಂಡೆಯಿಂದ ಇನ್ನೊಂದು ದಂಡೆಗೆ ಬರಬೇಕಾದರೆ ಬಹಳ ಕಷ್ಟ. ಅಲ್ಲಿ ಸೇತುವೆ ನಿರ್ಮಿಸಿದರೆ ಹೆಚ್ಚು ಅನುಕೂಲವಾಗುತ್ತದೆ. ಒಂದೆರಡು ಕೋಟಿ ರೂಪಾಯಿಗಳನ್ನು ನಮ್ಮ ಜಿಲ್ಲೆಯಲ್ಲಿ ಖರ್ಚುಮಾಡಿದರೆ ನಾವೂ ಇತರರ ಮಟ್ಟಕ್ಕೆ ಬರಬಹುದು. ಉಪ್ಪಿನಮಾಳ ಸೇತುವೆ ಆಗಬೇಕು.

ನೀರಾವರಿ ಸೌಕರ್ಯಕ್ಕೆ ಹೆಚ್ಚು ಗಮನ ಕೊಡಬೇಕು. ಅದರಿಂದ ಹೆಚ್ಚು ಅಭಿವೃದ್ಧಿಯಾಗಲು ಅವಕಾಶವಿದೆ. ಡೋಣಿ ಪ್ರಾಜೆಕ್ಟ್ ಕೈಕೊಳ್ಳುವ ವಿಚಾರ ಸರ್ಕಾರದ ಗಮನದಲ್ಲಿದೆ. ಅಲ್ಲಿ ಉಪ್ಪುನೀರಿದೆ. ಪ್ರಾಜೆಕ್ಟ್ ಮಾಡಿ ಸೌಕರ್ಯ ಕಲ್ಪಿಸಬೇಕು. ಮಲಪ್ರಭ, ಕೃಷ್ಣ ಪ್ರಾಜೆಕ್ಟ್

ಗಳನ್ನು ತೀವ್ರವಾಗಿ ಕೈಕೊಳ್ಳ ಬೇಕು. ಕೃಷ್ಣ ಬಗ್ಗೆ ಒಂದು ದೊಡ್ಡ ಸಮಸ್ಯೆಯಿದೆ. ಸಂಗಮ ಆ ಪ್ರಾಜೆಕ್ಟಿನಿಂದ ಮುಳುಗುತ್ತದೆ, ಲಿಂಗಾಯಿತರ ಆಕ್ಷೇಪವಿದೆ ಎಂದು ಹೇಳುತ್ತಾರೆ. ಆದರೆ ದೇಶಕ್ಕೆ ಹಿತವಾಗುವಾಗ ಇದನ್ನೆಲ್ಲಾ ನೋಡಿದರೆ ಹೇಗೆ ? ಆಲಿಮಟ್ಟಿ ಹತ್ತಿರ ಪ್ರಾಜೆಕ್ಟಾದರೆ ನಮ್ಮ ಜಿಲ್ಲೆಗೆ ಹೆಚ್ಚಿನ ನೀರಾವರಿ ಅನುಕೂಲವಾಗುತ್ತದೆ. ಮಲಪ್ರಭ ಪ್ರಾಜೆಕ್ಟನ್ನೂ ತೀವ್ರವಾಗಿ ತೆಗೆದುಕೊಳ್ಳಬೇಕು.

ಡಿ. ಎಲ್. ಬಿ.ಗೆ ಸಂಬಂಧಪಟ್ಟ ಕೆಲಸಗಳನ್ನು ಲೋಕೋಪಯೋಗಿ ಇಲಾಖೆಯು ವಹಿಸಿ ಕೊಂಡು ಬೇಗ ಇಂಜನಿಯರುಗಳ ನೇಮಕವಾಗಬೇಕು. ಬಾಗೇವಾಡಿ ತಾಲ್ಲೂಕಿನಲ್ಲಿರುವ ಅಪ್ರೋಚ್ ರಸ್ತೆಗೆ 1942-43 ರಿಂದಲೂ ರಿಪೇರಿಯಿಲ್ಲ. ಪ್ರಶ್ನೆ ಹಾಕಿದಾಗ ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ ಟಿ. ಸುಬ್ರಹ್ಮಣ್ಯರವರು ಪರಿಶೀಲಿಸುವುದಾಗಿ ಹೇಳಿದರು. ಆದಷ್ಟು ಬೇಗ ರಸ್ತೆಯಿಲ್ಲವೆಂದು ಹೇಳುವಾಗ ಕೂಡಲೆ ಕಾರ್ಯಕ್ರಮ ಕೈಕೊಳ್ಳಬೇಕೆಂದು ಇಷ್ಟು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

†ಶ್ರೀ ಬಿ. ಎಲ್. ನಾರಾಯಣ ಸ್ವಾಮಿ (ಮುಳಬಾಗಲು).—ಸ್ವಾಮಿ, ಲೋಕೋಪಯೋಗಿ ಶಾಖೆ ವಿಚಾರದಲ್ಲಿ ಮಾನ್ಯ ಸದಸ್ಯರನೇಕರು ಕೂಲಂಕಷವಾಗಿ, ಬಹಳ ವಿಚಾರಪೂರ್ವಕವಾಗಿ ಭಾಷಣ ಮಾಡಿದ್ದಾರೆ. ಅವರ ಭಾಷಣ ಕೇಳಿದನಂತರ ನನ್ನ ಭಾಷಣ ಸ್ವಲ್ಪ ಕಡಮೆ ಮಾಡಬೇಕೆಂದು ಮನಸ್ಸು ಮಾಡಿದೆ. ಮಾನ್ಯ ಮಿತ್ರರು ಎಲ್ಲಾ ವಿಷಯಗಳನ್ನು ಹೇಳಿದ್ದಾರೆ. ಮುಖ್ಯವಾಗಿ ರಸ್ತೆ ವಿಚಾರ ಹೇಳಬೇಕೆಂಬ ಅಪೇಕ್ಷೆಯಿದೆ.

ಈಚೆಗೆ ಸಂಸ್ಥಾನದಲ್ಲಿ ಅನೇಕ ರಸ್ತೆಗಳಲ್ಲಿ ಮೋಟಾರು ವಾಹನಗಳ ಸಂಚಾರ ಬಹಳ ಜಾಸ್ತಿಯಾಗಿದೆ. ಆದರೆ ರಸ್ತೆಗಳು ಮಾತ್ರ ತೀವ್ರವಾಗಿ ಕೆಟ್ಟಿವೆ. ಈ ವಿಚಾರದಲ್ಲಿ ಹೆಚ್ಚು ನಿಗಾಕೊಡಬೇಕು. ಹಿಂದೆ ರಿಲೀಫ್ ಫಂಡಿನಿಂದ ಮತ್ತು ಕಮ್ಯುನಿಕೇಷನ್ ಫಂಡಿನಿಂದ ಮಾಡಿದ ಅನೇಕ ರಸ್ತೆ ಕಾಂಗಾರಿಗಳನ್ನು ಅಲ್ಲಿಗೇ ನಿಲ್ಲಿಸದೆ ಮುಂದುವರೆಸಿ ಉಳಿದಿರುವ ರಸ್ತೆಗಳನ್ನು ಸ್ಕೀಂಪ್ರಕಾರ ತೆಗೆದುಕೊಳ್ಳಬೇಕು.

ಕೆಲವುಕಡೆ ಟೌನುಗಳ ಮಧ್ಯೆ ಸ್ಟೇಟ್‌ಫಂಡ್ ರಸ್ತೆಯಿದೆ. ಅಲ್ಲಿ ಬಸ್ಸುಗಳ ಸಂಚಾರ ಹೇರಳವಾಗಿರುವುದರಿಂದ ಹೆಚ್ಚು ತೊಂದರೆಯಾಗಿದೆ. ಶ್ರೀನಿವಾಸಪುರ ಟೌನ್ ಮಧ್ಯೆ ಇರುವ ಸ್ಟೇಟ್‌ಫಂಡ್ ರಸ್ತೆ ಇಕ್ಕಟ್ಟಾಗಿದೆ. ದಿನವಹಿ ಸುಮಾರು 40 ಬಸ್ಸುಗಳ ಓಡಾಟವಿದ್ದು ತೊಂದರೆಯಾಗಿರುವುದರಿಂದ ಪೌರಸಭೆಯವರು ಒಂದು ರಸ್ತೆ ಮಾಡಿಸಿದ್ದಾರೆ. ಆ ರಸ್ತೆಯಲ್ಲಿ ಈಗ ಬಸ್ಸುಗಳು ಓಡಾಡುತ್ತಿವೆ. ಆದಾಯ ಸರ್ಕಾರ ಪಡೆಯುತ್ತಿರುವಾಗ ರಸ್ತೆಯ ಮೈಂಟೆನೆನ್ಸ್ ಕೆಲಸವನ್ನು ಮುನಿಸಿಪಾಲಿಟಿ ಮಾಡುವುದು ನ್ಯಾಯವಲ್ಲ. ಈ ವಿಷಯವನ್ನು ಹಿಂದೆ ಅನೇಕಸಲ ಮನವಿ ಮಾಡಿದೆ. ಸೂಪರಿಂಟೆಂಡಿಂಗ್ ಇಂಜನಿಯರು ಪರೀಕ್ಷೆಮಾಡಿ ಈ ರಸ್ತೆ ತೆಗೆದುಕೊಳ್ಳಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಅದಕ್ಕೆ ಸಂಬಂಧಪಟ್ಟ ಕಾಗದ ಈಗ ಯಾವ ಮೂಲೆಯಲ್ಲಿ ಬಿದ್ದಿದೆಯೋ ಗೊತ್ತಿಲ್ಲ. ಅದನ್ನು ಮಂತ್ರಿಗಳು ತರಿಸಿ ನೋಡಿ ಜಾಗ್ರತೆ ಮಂಜೂರು ಮಾಡಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಹೇಳಿದ ರಸ್ತೆ ಯಾವುದು ?

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಶ್ರೀನಿವಾಸಪುರದಿಂದ ಹೋಗುವ ಸ್ಟೇಟ್‌ಫಂಡ್ ರಸ್ತೆ. ಅಲ್ಲಿನ ಡೀವಿಯೇಷನ್ ರಸ್ತೆ ಕೆಲಸ ತೆಗೆದುಕೊಳ್ಳಬೇಕು.

ಇನ್ನು ಕಟ್ಟಡ ಮತ್ತು ಮೈನರ್ ಇರಿಗೇಷನ್ ವಿಚಾರ. ಈ ಸಂಬಂಧದಲ್ಲಿ ತಡವಾಗುವುದಕ್ಕೆ ಮೂರು ವಿಧವಾದ ಕಾರಣಗಳುಂಟು. ಆವಶ್ಯಕವಾಗಿ ಆಗಬೇಕಾದ ಕೆಲಸಗಳಿಗೆ ಅಂದಾಜಾಗದಿರುವುದು ಒಂದು. ಅಂದಾಜಾಗಿರುವುದು ಮಂಜೂರಾಗದಿರುವುದು ಎರಡನೆಯದು. ಮಂಜೂರಾಗಿ ಕೆಲಸವಾಗದಿರುವುದು ಮೂರನೆಯದು. ಅನೇಕ ಕೆಲಸಗಳಿಗೆ ಅಂದಾಜು ಸಹ ಆಗದಿರುವುದನ್ನು ತಿಳಿಸಿದ್ದೇವೆ. ಪ್ರಶ್ನೆ ಸಹ ಆ ಬಗ್ಗೆ ಹಾಕಿದ್ದೇವೆ. ಭರವಸೆ ಕೊಟ್ಟು ಒಂದು ವರ್ಷವಾಗಿರುವ ಸಂದರ್ಭದಲ್ಲೂ ಸಹ ಅಂದಾಜಾಗಿಲ್ಲ. ಕೇಳಿದರೆ ಆಫೀಸಿನಲ್ಲಿ ಸಂಬಂಧಪಟ್ಟ ಕಾಗದವಿಲ್ಲ, ಗೈರುವಿಲೆ ಆಗಿದೆಯೆಂದು ಹೇಳುತ್ತಾರೆ; ಕಾಪಿ ಸಹ ಇಲ್ಲವಂತೆ. ಕಂಟ್ರಾಕ್ಟರುಗಳಿಗೆ ಮಂತ್ರಿಗಳಿಗಿಂತ ಹೆಚ್ಚು ಶಕ್ತಿಯಿದೆ. ಅವರು ಮನಸ್ಸುಮಾಡಿದರೆ ಯಾವುದು ಬೇಕಾದರೂ ಜಾಗ್ರತೆ ಮಂಜೂರಾಗುತ್ತದೆ.

ಮೈನರ್ ಇರಿಗೇಷನ್ ವಿಚಾರದಲ್ಲಿಯೂ ಅಷ್ಟೆ. ಮಂಜೂರಾಗಿರತಕ್ಕ ಅನೇಕ ಕೆಲಸಗಳು ಇದುವರೆಗೂ ಕಾರ್ಯಗತವಾಗಿಲ್ಲ. ಏನಾದರೂ ಒಂದು ಕಾರಣ ಹೇಳುತ್ತಾರೆ. ಕಂಟ್ರಾಕ್ಟರ್ ಸಿಕ್ಕಲಿಲ್ಲ, ವಿರಾಮವಿಲ್ಲ, ರೇಟ್ಸ್ ಗಿಟ್ಟುವುದಿಲ್ಲ ಎಂದು ಏನಾದರೂ ಹೇಳುತ್ತಾರೆ.

ಕಟ್ಟಡಗಳ ಕೆಲಸದ ವಿಚಾರ ಹೇಳುವುದಾದರೆ ಶ್ರೀನಿವಾಸಪುರದಲ್ಲಿ ಒಂದು ಕಟ್ಟಡಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಾಲ್ಕು ವರ್ಷಗಳಾದರೂ ಕೆಲಸ ಬಾಕಿಇದೆ. ಅದಕ್ಕೆ ಕೊಡತಕ್ಕ ಕಾರಣಗಳು ಸಕಾರಣವಾಗಿವೆಎಂದು ! ಹೇಳುತ್ತೇನೆ. ಅನೇಕ ಸಂದರ್ಭಗಳಲ್ಲಿ ಷೆಡ್ಯೂಲ್ ರೇಟ್ಸ್ workout ಆಗುವುದಿಲ್ಲವೆಂದು ಹೇಳುತ್ತಾರೆ. ದಿನೇ ದಿನೇ ಎಲ್ಲ ಪದಾರ್ಥಗಳ ಧಾರಣೆಯೂ ಉಲ್ಬಣಕ್ಕೆ ಬರುತ್ತಿರುವಾಗ ಕಟ್ಟಡದ ಖರ್ಚು ಕೂಡ ಜಾಸ್ತಿಯಾಗುತ್ತದೆ. Schedule rates ಹಾಕುವಾಗ ಸರಿಯಾದ data ಇಟ್ಟುಕೊಂಡು ಲೆಕ್ಕ ಹಾಕುವುದಿಲ್ಲವೋ ಏನೋ ಎಂದನ್ನಿಸುತ್ತದೆ. ಅವರು ವಾಸ್ತವಾಂಶಗಳನ್ನೂ ಆಯಾ ಸ್ಥಳದ ವಿದ್ಯಮಾನವನ್ನೂ ಅನುಸರಿಸಿ ನ್ಯಾಯಬದ್ಧವಾದ ಧಾರಣೆಯನ್ನು ನಿಗದಿಮಾಡಿದರೆ ಅನುಕೂಲವಾಗಬಹುದೇನೋ ? ಈ ಬಗ್ಗೆ ಸರ್ಕಾರದವರು ಎಚ್ಚರಿಕೆ ತೆಗೆದುಕೊಳ್ಳಬೇಕು.

ಕಂಟ್ರಿಬ್ಯೂಷನ್ ಕೆಲಸಗಳು ಪೌರಸಭೆಗಳು ಮತ್ತು ಪಂಚಾಯಿತಿಗಳು ಇಂಥವು ಸರ್ಕಾರಕ್ಕೆ ಏನಾದರೂ ಕೆಲಸಗಳನ್ನು ವಹಿಸಿದರೆ ಬಹಳ ನಿಧಾನವಾಗುತ್ತದೆ. ನಿದರ್ಶನಕ್ಕೆ ಶ್ರೀನಿವಾಸಪುರದಲ್ಲಿ, ಬಸ್‌ಸ್ಟಾಂಡ್ ಕೆಲಸಕ್ಕಾಗಿ 13,300 ರೂಪಾಯಿಗಳನ್ನೂ ಠೇವಣಿ ಮಾಡಿ ಮೂರು ವರ್ಷವಾಯಿತು. ಇದುವರೆಗೂ ಕೆಲಸವಾಗಿಲ್ಲ. ಕಾರಣ ಕೇಳಿದರೆ ಅಂದಾಜನ್ನು ಪುನರ್ವಿಮರ್ಶೆ ಮಾಡಿದ್ದೇವೆ. 2700 ರೂಪಾಯಿಗಳನ್ನು ಹೆಚ್ಚಿಗೆ ಕೊಡಬೇಕು ಎಂದು ಹೇಳಿದರು. ಸರ್ಕಾರದವರು ತಡಮಾಡಿದ್ದಕ್ಕೆ ಮುನಿಸಿಪಾಲಿಟಿಯವರಿಗೆ ಜುಲ್ಮಾನೆಯಾಯಿತು. ಅವರು ಈ ಹಣವನ್ನೂ ಕಟ್ಟಿದರು. ಒಟ್ಟು 16 ಸಾವಿರ ರೂಪಾಯಿ ಆಯಿತು. ಇವತ್ತಿನವರೆಗೂ ಕಂಟ್ರಾಕ್ಟರನ್ನೂ ಗೊತ್ತುಮಾಡಿಲ್ಲ, ಕೆಲಸವಾಗಿಲ್ಲ. ಇಲಾಖೆಯವರು ಮುನಿಸಿಪಾಲಿಟಿಯಿಂದ ಸೂಪರ್‌ವಿಷನ್‌ಗಾಗಿ

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಹಣವನ್ನು ತೆಗೆದುಕೊಳ್ಳುತ್ತಾರೆ. ದಳ್ಳಾಳಿಗಳು ಮಾಡುವ ಕೆಲಸ ಜವಾಬ್ದಾರಿಯುತವಾದುದು. ಇವರು ತಡಮಾಡಿದ್ದಕ್ಕೆ ಸಾವಿರಗಟ್ಟಲೆ ಹಣವನ್ನು ಪೌರಸಭೆಯವರಿಂದ ಪಡೆಯುವುದು ಯಾವ ನ್ಯಾಯ? ಕಂಟ್ರಿಬ್ಯೂಷನ್ ಕೆಲಸಗಳ ವಿಚಾರದಲ್ಲಿ ಹೆಚ್ಚಿನ ದಯೆ ತೋರಿಸಬೇಕೆಂದು ಮಾನ್ಯ ಸಚಿವರಲ್ಲಿ ಬೇಡಿಕೊಳ್ಳುತ್ತೇನೆ.

ಕೆರೆಗಳವಿಚಾರದಲ್ಲಿ, ಅನೇಕ ದೊಡ್ಡಕೆರೆಗಳಲ್ಲಿನ ನೀರು ಬಹಳಮಟ್ಟಿಗೆ ಪೋಲಾಗುತ್ತಿದೆ. ಇದಕ್ಕೆ regulated water supply system ಇಟ್ಟುಕೊಳ್ಳುವುದು ಬಹಳ ಒಳ್ಳೆಯದು. ಇದನ್ನು ಸಣ್ಣ ಕೆರೆಗಳಿಗೂ ಅನ್ವಯಿಸಬಹುದು. ಆದರೆ ಕನಿಷ್ಟಪಕ್ಷ 300 ಎಕರೆಗೆ ಮೇಲ್ಪಟ್ಟು ಅಚ್ಚುಕಟ್ಟಿರುವ ಕಡೆ ಇಂಥ ಪದ್ಧತಿಯನ್ನು ಜಾರಿಗೆ ತರುವುದರಿಂದ ಬಹಳ ಮಟ್ಟಿಗೆ ನೀರು ಪೋಲಾಗುವುದನ್ನು ತಪ್ಪಿಸಿ ಬೆಳೆಗೆ ಅನುಕೂಲಮಾಡಿಕೊಡಬಹುದು. ರೈತರೂ ಈ ಪದ್ಧತಿಯನ್ನು ಸ್ವಾಗತಿಸುತ್ತಾರೆ. ಯಾರೂ ಉಪೇಕ್ಷಿಸುವುದಿಲ್ಲ. ಇಂಥ ಒಂದು ಪದ್ಧತಿಯನ್ನು ಜಾರಿಗೆ ತರಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀನಿವಾಸಪುರ ಮತ್ತು ಮುಳಬಾಗಲ್ ತಾಲ್ಲೂಕುಗಳು ಎರಡೂ ಸೇರಿ ಒಂದು ಸಬ್ ಡಿವಿಷನ್ ಆಗಿದೆ. ಈ ಸಬ್‌ಡಿವಿಷನ್ನೇ ಈಚೆಗೆ ಕೆಲಸ ಜಾಸ್ತಿಯಾಗುತ್ತಿದೆ. ಈ ಕಾರಣದಿಂದ ಕೆಲಸ ತೃಪ್ತಿಕರವಾಗಿ ನಡೆಯುವುದಕ್ಕೆ ಅವಕಾಶವಿಲ್ಲ. ಅಲ್ಲಿರತಕ್ಕ ಅಸಿಸ್ಟೆಂಟ್ ಇಂಜಿನಿಯರು ಎಷ್ಟೋ ಶ್ರದ್ಧೆಯಿಂದ ಕೆಲಸ ಮಾಡಿದರೂ ಅವರಿಗೆ ಸಾಕಾದಷ್ಟು ನಿಗಾ ಕೊಡುವುದಕ್ಕೆ ಅವಕಾಶವಿಲ್ಲವಾಗಿದೆ. ಸುಮಾರು ಆರುಲಕ್ಷ ರೂಪಾಯಿ ಕೆಲಸ ಆಗಬೇಕಾಗಿದೆ. ಶ್ರೀನಿವಾಸಪುರ ತಾಲ್ಲೂಕು ಒಂದರಲ್ಲೇ ಆಗಬೇಕಾದ ಇನ್ನೂ ಎರಡು ಲಕ್ಷರೂಪಾಯಿಗಳ ಅಂದಾಜುಗಳು ಬಾಕಿ ಇವೆ. ಇದನ್ನೆಲ್ಲ ಒಬ್ಬರೇ ಅಸಿಸ್ಟೆಂಟ್ ಇಂಜಿನಿಯರು ನೋಡಿಕೊಳ್ಳಲು ಸಾಧ್ಯವಿಲ್ಲ. ಆದಕಾರಣ ಬಹಳ ದಿವಸಗಳಿಂದ ಬೇಡಿಕೊಳ್ಳುತ್ತಿರುವಂತೆ ಶ್ರೀನಿವಾಸಪುರದಲ್ಲಿ ಹೊಸದಾಗಿ ಒಂದು ಸಬ್‌ಡಿವಿಷನ್ ಆಫೀಸ್ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಆಸ್ಪತ್ರೆ ಕಟ್ಟಡಗಳ ವಿಚಾರದಲ್ಲಿ ಒಂದೆರಡುಮಾತು, ಬೇರೆಕಟ್ಟಡಗಳ ವಿಚಾರವಾಗಿ ಹೇಳಿದುದನ್ನೇ Medical buildings ವಿಚಾರದಲ್ಲೂ ಹೇಳಬಹುದು. ಗೌನಪಲ್ಲಿ ಆಸ್ಪತ್ರೆ ಕೆಲಸ ಪ್ರಾರಂಭವಾಗಿ ನಾಲ್ಕು ವರ್ಷವಾಯಿತು. ಛಾವಣಿ ಮಟ್ಟಕ್ಕೆ ಬಂದುನಿಂತು ಹೋಗಿ ಒಂದೂವರೆವರ್ಷವಾಗಿದೆ. ಮಳೆಗೆ ನೆನೆದು, ಬಿಸಿಲಿಗೆ ಒಣಗುತ್ತಇದ್ದರೆ ಕಟ್ಟಡದ ಗತಿ ಏನಾಗುತ್ತದೆ? ಇದಕ್ಕೆ ಹೆಚ್ಚಿನ ನಿಗಾ ಕೊಡಬೇಕೆಂದು ಪ್ರಾರ್ಥನೆಮಾಡಿ ಇಷ್ಟೊಂದು ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ಅನಂತ ವಂದನೆಗಳನ್ನರ್ಪಿಸುತ್ತೇನೆ.

ಅಧ್ಯಕ್ಷರು.—ಈಗ ಆರು ಗಂಟೆಯಾಯಿತು. ಅದಕ್ಕಾಗಿ ನಾಳೆ ಮಧ್ಯಾಹ್ನ 12 ಗಂಟೆಯಿಂದ ಎರಡು ಗಂಟೆಯವರೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

Sri J. B. MALLARADHYA.—Sir, everyday this is happening. This is not part of the agreement between the Parties. It is all right so far as today is concerned. But, why should two hours of tomorrow's Demands be taken away?

Sri M. C. NARASIMHAN.—Sir, the Leader of the House and the Minister concerned said that the Minister would reply today.

Sri M. MALLIKARJUNASWAMY.—Sir, this is an important Demand and I should like to express my views.

Mr. SPEAKER.—I have not received your name.

Sri H. M. CHANNABASAPPA.—Sir, one submission. I have no objection to reply this moment; I have got all the material ready. But, I would like to submit that I am not well and so my reply may not be so satisfactory. But, if the House so desires, I have no objection to reply today itself.

Sri J. B. MALLARADHYA.—If the Hon'ble Minister pleads illness, we would not be so inhuman as to ask him to reply now.

Sri V. P. DEENADAYALU NAIDU (Cubbonpet).—Sir, my fear is this; if you give longer time to our Minister, he will get more sick because he will start collecting more statistics. (Laughter).

Mr. SPEAKER.—Anyhow, I did not disclose the reason why I wanted that the reply should be given tomorrow. In fact, the Hon'ble Minister requested me that as he was not keeping well he would reply tomorrow. I did not want to disclose it here.

The House now rises and will meet tomorrow at 12 NOON.

The House adjourned at Eight Minutes past Six of the Clock to meet again at Twelve of the Clock on Thursday, the 14th April 1960.